Reg. No. [illegible]
If not delivered please return to
"KODAGU" OFFICE, MERCARA.

21—6—1935.

ಕೊಡಗು.

ಸಕ್ಕೇನ ಘೊತೆದಯಯಾ ವಿದ್ಯಾ ನೀತಿ ಪ್ರಯಚ್ಛತಾಃ ॥ ಐಕ್ಯಮುಕ್ಕೇನ ದೇಶಾನಾಂ ಸುಸ್ಥಿರಾಣಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪೆಂದ್ಯಂಡ ಐ. ಚೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಸಂಪುಟ ೧೫	ಮಡಿಕೇರಿ, ಸನ್ ೧೯೩೫ನೇ ಇಸವಿ ಜೂನ್ ತಾರೀಕು ೨೧ನೇ ಶುಕ್ರವಾರ.	ಸಂಚಿಕೆ ೩

Telegrams:
'PRECIOUS.'

By Appointment
To H. E. The Governor of Madras.

Telephone;
3145



Ear rings Rs. 150 & upwards.

M. R. Ry., Dewan Bahadur
K. Chengappa Avl., B. A.
(Retd) Commissioner of Coorg, Writes:

I have had dealings with V. Subramania Iyer, Jeweller, for the last 5 or 6 years. The firm is **absolutely reliable, reasonable in prices** and **very obliging.** The **workmanship is good.**

M. R. Ry. Rao Bahadur
A. B. Chengappa Avl.
'Green Hills', Virajpet Writes;—

I had all my work done by Mr V. Subramania Iyer Jeweller, for over ten years.... .... He gives The Best Of Satisfaction His Charges are Moderate, and the Finish is Very Good.

Necklace Rs 100 & upwards.

Fashionable ornaments for the marriage season.

Brooch Rs. 20 & upwards.

V. SUBRAMANIA IYER.

Jeweller, & Diamond Merchant,

52—31 2 & 3 Kuppumuthu Street Tiruvateswarapet. MADRAS. Post Box 423 Triplicane.

Catalogue & special designs with quotations (free) on enquiry.

1906 ನೇ ಇಸವಿಯಲ್ಲಿ ಸ್ಥಾಪಿತವಾದ

"ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಉಡುಪಿ," ಲಿಮಿಟೆಡ್.

ಹೆಡ್ ಆಫೀಸು:—ಉಡುಪಿ.

ಶಾಖೆಗಳು:—(1) ಉಡುಪಿ (2) ಕುಂದಾಪುರ (3) ಮಂಗಳೂರು—ರಥ ಬೀದಿ. (4) ಮಂಗಳೂರು—ಬಂದರ್. (5) ಮದ್ರಾಸು. (6) ಶಿವಮೊಗ್ಗಾ (ಮೈಸೂರು) (7) ಮಡಿಕೇರಿ—(ಕೊಡಗು.)

ಕೊಡಗಿನ ಸೇವೆಯನ್ನು ಮಾಡಲಿಚ್ಛಿಸಿ ತನ್ನ 30ನೇ ವಯಸ್ಸಿನಲ್ಲಿ ಮಡಿಕೇರಿ ಶಾಖೆಯನ್ನು ಆರು ತಿಂಗಳ ಹಿಂದೆ ತೆರೆದಿರುವುದನ್ನು ತಿಳಿದಿರುವಿರಾ?

ನಿಯಮಿತ ವ ಚಂದಾ ಹಾಕಿದ ಮೂಲಧನ	....	ರೂ. 3,50,000
ತಾ. 6—3—1935ರಲ್ಲಿ ಚಂದಾ ಹಾಕಿ ಎತ್ತಿದ ಮೂಲಧನ		,, 2,58 305
ಕ್ಷೇಮನಿಧಿ ವ ಇತರ ಅವಿಭಜಿತ ನಿಧಿಗಳು	....	,, 3,12,144

ನಿರಖು, ಜಾಲ್ತಿ, ಸೇವಿಂಗ್ಸ್, ಕ್ಯೂಮಿಲೇಟಿವ್, ಅಲ್ಪ ಪಾಯಿದೆ ಮುಂತಾದ ಠೇವಣಾತಿಗಳು ಸಹ ಸ್ವೀಕರಿಸಲ್ಪಡುತ್ತವೆ.

ವಿನಿಮಯ ಸೌಕರ್ಯವೇ ಪ್ರಮುಖ ಲಕ್ಷಣ!!!

ನಮ್ಮ ಶಾಖೆಗಳು ಇರುವ ಸ್ಥಳಗಳಲ್ಲಿ ಮೂತ್ರವಲ್ಲದೆ ಕರಾಚಿ, ಕಲ್ಕತ್ತ, ಮುಂಬಾಯಿ, ಮೈಸೂರು, ಬೆಂಗಳೂರು ಇತರ ಪ್ರಮುಖ್ಯ ಸ್ಥಳಗಳಿಗೆ ನಮ್ಮ ಡ್ರಾಫ್ಟುಗಳ ಮೂಲಕ ಹಣ ರವಾನಿಸುವ ಏರ್ಪಾಡನ್ನೂ, ಅಂಥಹ ಸ್ಥಳಗಳ ಮೇಲೆ ಸಿಡೆಲ್ಪಡುವ ಚೆಕ್ಕುಗಳನ್ನು ಕೊಂಡುಕೊಳ್ಳುವ ಏರ್ಪಾಡನ್ನೂ ಅತೀ ಸುಲಭ ದರದ ಕಮಿಶನ್‌ನಲ್ಲಿ ಮಾಡುವೆವು.

ಚಿನ್ನಾಭರಣಗಳ ಮೇಲೂ, ಪೋಸ್ಟಲ್ ಇತರ ಏನೂ ಸಾಲಿನಗಳ ಮೇಲೂ, ಬ್ಯಾಂಕಿನ ಅಭಿಪ್ರಾಯನಲ್ಲಿ ಖಾತ್ರಿಯಾಸು ಇಡಬಹುದಾದ ಧವಸ ಧಾನ್ಯಗಳ ಮೇಲೂ, ಬ್ಯಾಂಕಿಗೆ ಯುಕ್ತಕಾಡ ಇತರ ಜವಾಬ್ದಾರಿಯ ಮೇಲೂ ಅತೀ ಸಣ್ಣ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಮಡಿಕೇರಿ ಆಫೀಸಿಗೆ ಬರಕೊಳ್ಳಬಹುದು.

ಉಡುಪಿ,
ತಾ. 15—5—35. 52—32

M. Shrinivasa Prabhu,
(Manager.)

ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್.

31—12—33ನೇ ಇಸವಿಗೆ ಮುಗಿದ ಮೂರು ವರ್ಷಗಳ ಕಾರ್ಯಕ್ರಮದ ಪರಿಶೀಲನೆಯು ಉತ್ತಮ ಫಲಿತಾಂಶವನ್ನು ಪ್ರಕಟಗೊಳಿಸಿದೆ.

ಖರ್ಚು ಕಳೆದು 6,75,000 ರೂ. ಗಿಂತಲೂ ಹೆಚ್ಚು ಉಳಿದಿದೆ.

ಬೋನಸ್ಸು ಹಂಚಿಕೆಯು ಹಿಂದೂಸ್ಥಾನದಲ್ಲಿ ಅನೇಕ ವರ್ಷಗಳಿಂದಲೂ ಇರುವ ದೊಡ್ಡ ಜೀವವಿಮಾ ಕಂಪೆನಿಗೆ ಸಂಸಾರವಾಗಿದೆ.

ಜೀವಾವಧಿ ಪಾಲಿಸಿಗಳ ಮೇಲೆ ಸಾಲಿಯೂನ ರೂ. 25%
ಎಂಡೋಮೆಂಟ್ ಪಾಲಿಸಿಗಳ ಮೇಲೆ ಸಾಲಿಯೂನ ರೂ. 20%

ಜಾರಿಯಲ್ಲಿರುವ ವಿಮೆ ಮೊಬಲಗು (ಹೆಚ್ಚು) ರೂ. 25,000000
ಸಾಲಿಯೂನ ವರವೂನ (ಹೆಚ್ಚು) ರೂ. 16,00000
ಠೇವಾದೇವಿಗೆ ಹಾಕಿರುವ ಮೊಬಲಗು (ಸುಮಾರು) 70,00000
ಹಕ್ಕಿನ ತೀರ್ವೂನ (ಹೆಚ್ಚು) ರೂ 31,00000

ನಂಬಿಕೆ ಅರ್ಹವಾದ ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಈ ಜೀವ ವಿಮೆ ಕಂಪೆನಿಯಲ್ಲಿ ಈ ದಿನವೇ ವಿಮೆ ಮಾಡಿರಿ.

ಏಜೆನ್ಸಿಯ ಫಿಯಮುಗಳು ವಿಶೇಷ ಲಾಭದಾಯಕ.

ಇತರ ವಿವರಗಳಿಗೆ ಕೂಡಲೇ ಈ ಕೆಳಗಿನವರಿಗೆ ಬರೆಯಿರಿ:—

ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ಅಜ್ಮೀರ್. ಅಥವಾ:—

ಎ. ಎನ್ ಎಸ್ ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್,
ಚಾಮರಾಜಪೇಟೆ, 3ನೇ ರೋಡು.

52—3 ಬೆಂಗಳೂರು ಸಿಟಿ

ಕೊಡಗು.

ಸನ್ ೧೯೫೫ನೇ ಇಸವಿ

ಜೂನ್ ತಾ. ೨೧ನೇ ಶುಕ್ರವಾರ.

ಕೊಡವರ ಪದ್ಧತಿಯು ಸಿವಿಲ್ ಲಾ.

ಕೊಡವರ ಪದ್ಧತಿಯ 'ಸಿವಿಲ್ ಲಾ' ಬದಲಾವಣೆಯನ್ನು ಕುರಿತು ದಕ್ಷಿಣ ಕೊಡಗಿನ ಜನರು ಕಮಿಷನರವರಿಗೆ ಕಳುಹಿಸಿರುವ ಅರ್ಜಿಯ ನಕಲು ಇನ್ನೊಂದು ಕಡೆ ಕೊಡಲಾಗಿದೆ. ''ಸನ್ 1871ನೇ ಇಸವಿಯಲ್ಲಿ ಕೊಡಗು ದೇಶದ ಸುಪರಿಂಟೆಂಡೆಂಟರಾಗಿದ್ದ 'ಕೆಪ್ಪನ್' ಕೋಲ್ ಸಾಹೇಬರು ಕೊಡಗು ನಿವಾಸಿಗಳ 'ಕಸ್ಟಮರಿ ಲಾ' ಕುರಿತು ಮಾಡಿಟ್ಟಿರುವ ಸಿವಿಲ್ ಲಾ ಮ್ಯಾನ್ಯುವಲನ್ನು ಅನುಸರಿಸಿ ಈ ವರೆಗೆ ಕೊಡಗಿನಲ್ಲಿ ಜಾರಿಯಲ್ಲಿರುವ ಪದ್ಧತಿಯನ್ನು ಈಗಿನ ಕಾಲಕ್ಕೆ ಅನುಗುಣವಾಗಿ ಬದಲಾವಣೆ ಮಾಡುವ ವಿಷಯದಲ್ಲಿ ಕೊಡಗಿನ 2—3 ಮುಖಂಡರ ಮಾತ್ರ ಇರಾದೆಯನ್ನು ಕೇಳುವಂತೆ ಕಮಿಷನರವರು ಹುಕುಂ ಮಾಡಿರುವರಾಗಿ ತಿಳಿದು ಬಂದಿದೆ'' ಎಂದು ಆ ಅರ್ಜಿಯಲ್ಲಿ ಕಾಣಿಸಲಾಗಿದೆ. ಇದು ನಿಜವಾಗಿದ್ದ ಪಕ್ಷ ದೊಡ್ಡ ಅನ್ಯಾಯವೆಂದೇ ಹೇಳಬೇಕಾಗಿದೆ.

ಕ್ಯಾಪ್ಟನ್ ಕೋಲ್‌ರವರು 64 ವರ್ಷಗಳ ಹಿಂದೆ (ಈಗಿನ ಕಮಿಷನರವರಂತೆ) ಸುಪರಿಂಟೆಂಡೆಂಟ್ ಅಧಿಕಾರದಲ್ಲಿದ್ದಾಗ್ಗೆ ಕೊಡವರ ಪದ್ಧತಿಯ 'ಸಿವಿಲ್ ಲಾ' ಮ್ಯಾನ್ಯುವಲನ್ನು ಬರೆದಿಟ್ಟದ್ದಾಗಿದೆ. ಆಗ ಅವರು ದೇಶದ ಜನರ ಅಭಿಪ್ರಾಯವನ್ನೆಂದಿಗೂ ಕೇಳಿಲಿಕ್ಕಿಲ್ಲ. ಕೆಲವು ಕೊಡವ ಉದ್ಯೋಗಸ್ಥರನ್ನು ಮಾತ್ರ ಕೇಳಿ ಆ ಮ್ಯಾನ್ಯುವಲನ್ನು ಬರೆದದ್ದಾಗಿರಬೇಕು. ಆದಕಾರಣ ಅದರಲ್ಲಿ ಕೊಡವರ 'ಸಿವಿಲ್ ಲಾ'ಕ್ಕೆ ಸಂಬಂಧಿಸುವ ಪದ್ಧತಿಗಳೆಲ್ಲಾ ಸರಿಯಾಗಿ ಸಂಗ್ರಹಿಸಲ್ಪಟ್ಟಿವೆಯೆಂದು ಹೇಳಲು ಸಾಧ್ಯವಿಲ್ಲ. ಅದೂ ಅಲ್ಲದೆ ಯಾವ ಜನಾಂಗದವರ ಪದ್ಧತಿಯೇ ಆಗಲಿ ಕಾಲಕ್ಕನುಸಾರವಾಗಿ ಬದಲಾವಣೆಯೊಗುತ್ತಾ ಬರುವುದು ಸ್ವಾಭಾವಿಕವಾಗಿದೆ. ಆದುದರಿಂದ 64 ವರ್ಷಗಳ ಹಿಂದೆ ಬರೆದಂಥಾ ಮ್ಯಾನ್ಯುವಲನ್ನು ಹಿಡ್ದುಪಡಿ ಮಾಡುವುದು ಅಗತ್ಯವಾಗಿದೆ.

ಉದಾಹರಣೆಗಾಗಿ, ಸ್ವಯಾರ್ಜಿತ ಆಸ್ತಿಯನ್ನು ತನ್ನ ಇಷ್ಟಾನುಸಾರ ಉಪಯೋಗಿಸುವ ಅಥವಾ ಪಂಥಾಹ್ವಾನ ಮಾಡುವ ಅಧಿಕಾರ ಸಂಪಾದಿಸಿದವನಿಗೆ ಇಲ್ಲವೆಂದು ಅಧಿಕಾರಿಗಳು ಕೋಲ್ಸ್ ಮ್ಯಾನ್ಯುವಲನ್ನು ಅನುಸರಿಸಿ ಮೊನ್ನೆ ತಾನೇ ತೀರ್ಪು ಕೊಟ್ಟಿರುವರೆಂದು ತಿಳಿಯುತ್ತೇವೆ ಆದರೆ ಸ್ವಯಾರ್ಜಿತ ಆಸ್ತಿಯ ಮೇಲೆ ಸಂಪಾದಿಸಿದವನಿಗೆ ಸಂಪೂರ್ಣ ಅಧಿಕಾರವಿರುವ ಪದ್ಧತಿಯು ಈಗ ಜಾರಿಯಲ್ಲಿರುವದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇಂಥಾ ಕುಂದುಕೊರತೆಗಳನ್ನು ಹೋಗಲಾಡಿಸಲು ಕೊಡವರ ನ್ಯಾಯವಾದ ಪದ್ಧತಿಗಳನ್ನೊಳಕೊಂಡ ಅಧಿಕಾರ ಹೊಂದಿದ ಒಂದು ಮ್ಯಾನ್ಯುವಲನ್ನು ತಯಾರಿಸುವುದು ಅವಶ್ಯವಾಗಿದೆ.

ಕೊಡವರ ಸಿವಿಲ್ ಲಾಕ್ಕೆ ಸಂಬಂಧಿಸುವ ಪದ್ಧತಿಯನ್ನು 'ಕೋಡಿಫೈ' ಅಂದರೆ ಸರ್ಕಾರದವರು ಖಾನೂನು ರೂಪಕ್ಕೆ ತರುವುದು ಉತ್ತಮವೆಂದು ಕೆಲವರ ಅಭಿಪ್ರಾಯವಾಗಿದೆ ಆದರೆ ಇದು ಉಚಿತವಲ್ಲವೆಂದೇ ನಮಗೆ ತೋರುತ್ತದೆ. ಜನರ ಪದ್ಧತಿಗಳು ಬದಲಾಗುತ್ತಾ, ಬೆಳೆಯುತ್ತಾ ಬರುವುದರಿಂದ ಅವುಗಳನ್ನು ಖಾಯಂ ಖಾನೂನಾಗಿ ಮಾಡಿಡುವುದು ಸರಿಯಲ್ಲ. ಆದುದರಿಂದಲೇ ಹಿಂದೂ ಲಾವನ್ನು ಖಾನೂನು ರೂಪಕ್ಕೆ ತಾರದೆ ಇರುವುದಾಗಿದೆ. ಆದರೆ ಹಿಂದೂ ಲಾವನ್ನು ಜೆನ್ನಾಗಿ ಬಲ್ಲಂಥ ಮಹನೀಯರು ಕೆಲವರು ಅದನ್ನು ಪುಸ್ತಕ ರೂಪದಲ್ಲಿ ಬರೆದಿರುತ್ತಾರೆ. ಪದ್ಧತಿಯ ಮತ್ತು ಖಾನೂನಿನ ಜ್ಞಾನದ ಅಧಿಕಾರವುಳ್ಳ ಮಹನೀಯರು ಬರೆದಿರುವಂಥ ಈ ಪುಸ್ತಕಗಳನ್ನು ಕೋರ್ಟ್‌ನವರೂ ಅವಶ್ಯಬದ್ದಾಗ್ಗೆ ಉಪಯೋಗಿಸಿಕೊಳ್ಳುತ್ತಾರೆ. ಇಂಥಾ ಮ್ಯಾನ್ಯುವಲ್ಲಿನ ಅವಶ್ಯಕತೆಯ ಕೊಡವರಿಗೂ ಇದೆ. ಆದರೆ ಇಲ್ಲಿ ಅಂಥಾ ಪುಸ್ತಕವನ್ನು ತಿಳುವಳಿಕೆಯುಳ್ಳ ಮಹನೀಯರ್ಯಾರಿಗೂ ಬರೆಯಲು ಸಾಧ್ಯವಿಲ್ಲ. ಯಾಕಂದರೆ, ಹಾಗೆ ಬರೆದದ್ದೇ ಆದರೆ ಆ ಪುಸ್ತಕಗಳನ್ನು ಈ ಚಿಕ್ಕ ಪ್ರಾಂತ್ಯದಲ್ಲಿ ಕೊಂಡುಕೊಳ್ಳುವವರೇ ಕಡಮೆಯಾದ ಕಾರಣ ಅವುಗಳನ್ನು ಮುದ್ರಿಸುವ ಖರ್ಚು ಏಳಲಾರದು. ಹಿಂದೂ ಲಾದ ಪುಸ್ತಕವಾದರೋ ವಿಶಾಲವಾದ ಹಿಂದೂಸ್ಥಾನದಲ್ಲಿ ಬೇಕಾದಷ್ಟು ಮಾರಲ್ಪಡುವವು. ಆದುದರಿಂದ 'ಕೊಡವ ಲಾ'ದ ಪುಸ್ತಕವನ್ನು ತಯಾರಿಸಿ, ಮುದ್ರಿಸುವ ಕೆಲಸವನ್ನು ಇಲ್ಲಿಯ ಸರ್ಕಾರದವರೇ ಕೈಕೊಳ್ಳಬೇಕಾಗಿದೆ.

ಈ ಬಗ್ಗೆ ಇಲ್ಲಿಯ ಸರ್ಕಾರದವರು ಕೆಲವು ಸಮಯದ ಹಿಂದೆ 'ಕೊಡವ ಲಾ'ಕ್ಕೆ ಸಂಬಂಧಪಟ್ಟ ಸರ್ಕಾರಿ ರಿಕಾರ್ಡುಗಳನ್ನೂ, ಕೋರ್ಟುಗಳ ತೀರ್ಪುಗಳನ್ನೂ ಸಂಗ್ರಹಿಸಲು ಒಬ್ಬ ಉದ್ಯೋಗಸ್ಥರನ್ನು ಸ್ವಲ್ಪ ಕಾಲ ನೇಮಿಸಿದ್ದರೆಂದು ವರ್ತಮಾನ ಕೇಳಿತ್ತು. ಆದರೆ ಆ ಕೆಲಸವು ಎಲ್ಲಿಗೆ ಅಂತ್ಯವಾಯಿತೆಂದು ಗೊತ್ತಾಗಲಿಲ್ಲ.

'ಕೊಡವ ಲಾ'ದ ಮ್ಯಾನ್ಯುವಲನ್ನು ತಯಾರಿಸಲು ಮೂರು ವಿಷಯಗಳು ಅಗತ್ಯವಾಗಿವೆ. ಮೊದಲನೇಯದಾಗಿ ನಮ್ಮ ಪೂರ್ವ ಪದ್ಧತಿಯು ಪರಿಜ್ಞಾನ ಬೇಕು. ಇದಕ್ಕಾಗಿ, 64 ವರ್ಷಗಳ ಹಿಂದೆ ಬರೆದಿಡಲ್ಪಟ್ಟಿರುವ ಕೋಲ್ಸ್ ಮ್ಯಾನ್ಯುವಲನ್ನು ಉಪಯೋಗಿಸಿಕೊಳ್ಳಬಹುದು; ಅಲ್ಲದೆ ಪೂರ್ವಪದ್ಧತಿ ಗೊತ್ತಿರುವಂಥ ಹಳಬರನ್ನು ವಿಚಾರಿಸಿ ತಿಳಿಕೊಳ್ಳಬೇಕು. ಎರಡನೇಯದಾಗಿ ಕೊಡವ ಲಾವನ್ನು ಕುರಿತು ಅನುಭವಸ್ಥರಾದ ನ್ಯಾಯಾಧೀಶರು ಕೊಟ್ಟಿರುವ ತೀರ್ಪುಗಳನ್ನು ಸಂಗ್ರಹಿಸಿಕೊಳ್ಳಬೇಕು. ಆಖೈರಿಗೆ, ಈಗ ಜಾರಿಯಲ್ಲಿರುವ ಪದ್ಧತಿಯನ್ನು ಅರಿತುಕೊಳ್ಳಬೇಕು. ಈ ಮ್ಯಾನ್ಯುವಲು ಇತೀ ಕೊಡವ ಜನಾಂಗಕ್ಕೆ ಸಂಬಂಧಿಸುವ ಮುಖ್ಯ ವಿಷಯವಾದುದರಿಂದ ಇದನ್ನು ಇಬ್ಬರು—ಮೂವರ ಅಭಿಪ್ರಾಯದ ಮೇರೆ ತಿದ್ದುಪಡಿ ಮಾಡುವದು ಸರಿಯಲ್ಲ. ಪೂರ್ವ ಪದ್ಧತಿಯನ್ನು ಅರಿತುಕೊಳ್ಳಲು ತಿಳುವಳಿಕೆಯುಳ್ಳ ಹಳಬ ಮಹನೀಯರನ್ನೂ, ಈಗಿನ ಉಪಯುಕ್ತ ಪದ್ಧತಿಗಳನ್ನು ತಿಳಿಕೊಳ್ಳಲು ಬುದ್ಧಿವಂಥ ವಿದ್ಯಾಯುಕ್ತರನ್ನೂ ವಿಚಾರಿಸಿ ಅಭಿಪ್ರಾಯ ತೆಗೆದುಕೊಳ್ಳುವುದು ಅತ್ಯವಶ್ಯವಾಗಿದೆ. ಹೀಗೆ ಅಭಿಪ್ರಾಯ ತೆಗೆಯುವ ಕಾರ್ಯವನ್ನು ಒಬ್ಬಿಬ್ಬ ಉದ್ಯೋಗಸ್ಥರಿಗೆ ಬಿಡುವುದು ಯುಕ್ತವಲ್ಲ. ಇದಕ್ಕಾಗಿ ಒಂದು ಕಮಿಟಿಯನ್ನು ನೇಮಿಸುವುದು ಉತ್ತಮ. ಈ ಕಮಿಟಿಯಲ್ಲಿ ಕೆಲವು ಉದ್ಯೋಗಸ್ಥರು, ಕೆಲವು ಉದ್ಯೋಗಸ್ಥರಲ್ಲದವರೂ ಮೆಂಬರುಗಳಾಗಿರಬೇಕು. ನಿದ್ರಿಸುವ ಕಮಿಟಿಗಳಿಂದ ದೇಶವು ಬೇಸತ್ತು ಹೋಗಿದೆ. ಆದ ಕಾರಣ ಉತ್ಸಾಹದಿಂದ ಕೆಲಸ ಮಾಡುವ ಸಾಹಸೀಯರನ್ನು ಕಮಿಟಿಗೆ ನೇಮಿಸಿ, ಈ ಕಮಿಟಿಯವರು ಸಂಗ್ರಹಿಸುವ ಕೊಡವರ ಪದ್ಧತಿಯ ಸಿವಿಲ್ ಲಾವನ್ನು ವಿವರಣೆಗಳೊಂದಿಗೆ ಒಂದು ಪುಸ್ತಕ ರೂಪದಲ್ಲಿ ಸರ್ಕಾರದವರು ಪ್ರಕಟಿಸುವದು ಅಗತ್ಯವಾಗಿದೆ.

ಜೈನರು ಬಗ್ಗಿತು.

ಜಪಾನಿನ ಸಾಮ್ರಾಜ್ಯ ವಿಸ್ತರಿಸುವ ಆಶೆಯು ಜಪಾನು ಸರ್ಕಾರವನ್ನು ಸುಮ್ಮನಿರಲು ಬಿಡುವುದಿಲ್ಲ. ನ್ಯಾಯವಿರಲಿ, ಇಲ್ಲದಿರಲಿ ಅವರು ಆಗಾಗ್ಗೆ ಜೈನಾದ ಮೇಲೆ ದಂಡೆತ್ತಿ ಬರುವ ಭಯವನ್ನು ಸೂಚಿಸುವುದು. ದೊಡ್ಡದಾದರೂ ಸುಸಂಘಟಿತವಾದ ಸರ್ಕಾರವಿಲ್ಲದ ಜೈನಾವು ಜಪಾನಿಗೆ ಬಗ್ಗಬೇಕಾಗಿ ಬರುತ್ತೆ. ಈಗಾಗಲೇ ಜಪಾನು ಉತ್ತರ ಜೈನಾದಲ್ಲಿ ತನ್ನ ವ್ಯಾಪಾರಕ್ಕೆ ಬೇಕಾದ ಅನುಕೂಲವನ್ನು ಪಡಿಸಿಕೊಂಡಿದೆ.

ಕಳೆದ ಮೇ ತಾ. 30ರಲ್ಲಿ ಜಪಾನಿನ ಸರ್ಕಾರದವರು—ಉತ್ತರ ಜೈನಾದ ಚಿಲ್ಲಿ ಎಂಬ ಪ್ರಾಂತ್ಯದಿಂದ ಸರ್ಕಾರದ ಎಲ್ಲಾ ಸೈನ್ಯವನ್ನು ಹಿಂತೆಗೆಯಬೇಕ ; ಆ ಪ್ರಾಂತ್ಯದಲ್ಲಿ ಕವೊಮಿಂಟೀಂಗ್ ಸಂಸ್ಥೆಯ ಶಾಖೆಗಳನ್ನು ತೆಗೆದು ಹಾಕಬೇಕು; ಆ ಪ್ರಾಂತ್ಯದ ಗವರ್ನರವರಾದ ಜನರಲ್ ಯುಸುಚಂಗ್‌ರವರನ್ನು ಅವರ ಹುದ್ದೆಯಿಂದ ತೆಗೆದು ಹಾಕಬೇಕೆಂಬ ಮೊದಲಾದ 14 ಶರತ್ತುಗಳಿಂದ ಕೂಡಿದ ಪತ್ರವನ್ನು ಜೈನಾ ಸರ್ಕಾರಕ್ಕೆ ಕಳುಹಿಸಿದರು. ಈ ಶರತ್ತುಗಳನ್ನು ನಡಿಸಿಕೊಡದೆ ಹೋದರೆ ಯುದ್ಧ ಮಾಡುವೆವೆಂಬ ಭೀತಿಯನ್ನೂ ಹುಟ್ಟಿಸಿದರು. ಆ ಪ್ರಾಂತ್ಯದ ಮೇಲೆ ತಮ್ಮ ಯುದ್ಧದ ವಿಮಾನಗಳನ್ನು ಹಾರ್ರಾಡಿಸಿದರು; ಸೈನ್ಯಗಳ ಚಲನೆಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಾರಂಭಿಸಿದರು. ಇವನ್ನೆಲ್ಲಾ ನೋಡಿದ, ಶತ್ರಾಳ ಜಪಾನಿನೊಂದಿಗೆ ಯುದ್ಧ ಮಾಡಲು ಶಕ್ತಿ ಇಲ್ಲದ ಯಾ ಮನಸ್ಸಿಲ್ಲದ ಜೈನಾದ ಸರ್ಕಾರವು ಜಪಾನಿನ ಶರತ್ತುಗಳನ್ನು ನಡಿಸಿಕೊಡಲು ಒಪ್ಪಿ, ಜಪಾನಿನ ಹೇಳಿಕೆಗೆ ಒಗ್ಗಿತು. ರಕ್ತ ಸುರಿಸದೇನೇ ಜಪಾನಿನ ಕೋರಿಕೆಯು ಸರಸೇರಿತು

ಆದರೆ ಈ ಸಂಗತಿಯು ಬ್ರಿಟನ್ನನ್ನು ಸ್ವಲ್ಪ ಗಾಬರಿಗೊಳಿಸಿದೆಯಂತೆ. ವ್ಯಾಪಾರ ದೃಷ್ಟಿಯಿಂದ ಜಪಾನಿನ ಶಕ್ತಿಯು ಜೈನಾದಲ್ಲಿ ಹರಡಲಿಕ್ಕೆ ಬಿಡಲು ಬ್ರಿಟನ್ನಿಗೆ ಇಷ್ಟವಿಲ್ಲ. ಜಪಾನು ತನ್ನ ವ್ಯಾಪಾರವನ್ನು ಉತ್ತರ ಜೈನಾದಲ್ಲಿಯೇ ನಿಲ್ಲಿಸುವಷ್ಟಕ್ಕೆ ಬ್ರಿಟನು ಒಪ್ಪಿತ್ತು. ಆದರೆ ಈಗ ಜಪಾನು ತನ್ನ ವ್ಯಾಪಾರ ಕ್ಷೇತ್ರವನ್ನು ಇಡೀ ಜೈನಾದಲ್ಲಿ ಮಾತ್ರವಲ್ಲ, ಸರಂ, ಟಿಬೇಟ್, ಸಿಂಕ್ಯಾಂಗ್, ಅಫಘಾನಿಸ್ಥಾನ್ ಮತ್ತು ಇಂಡಿಯಾದಲ್ಲಿಯೂ ವಿಸ್ತರಿಸಲು ಯತ್ನಿಸುತ್ತಿದೆ; ಜೈನಾದ ತೀರದಲ್ಲಿ ತನ್ನ ಶಕ್ತಿಯು ಬಲವಾಗಿ ಬೇಕೆಂದು ಆಶಿಸುತ್ತಿದೆ. ಆದ ಕಾರಣ ಬ್ರಿಟಿಷರ ಸಿಂಗಾಪುರದ ಮಿಲಿಟರಿ ಭದ್ರತೆಯನ್ನು ಎದುರಿಸಲು ಸಯಾಂ ಮತ್ತು ಮಲಯಕ್ಕಾಗಿ ಒಂದು ಕಾಲುವೆ ತೋಡುವ ಏರ್ಪಾಡನ್ನು ಜಪಾನು ಆಲೋಚಿಸುತ್ತಿದೆಯಂತೆ. ಹೇಗೂ ಜಪಾನು ಏಷ್ಯಾಖಂಡದಲ್ಲಿ ಪ್ರಾಮುಖ್ಯತೆಗೆ ಬರುತ್ತಿರುವುದು ಬ್ರಿಟಿಷ ರಾಜಕೀಯ ಪಟ್ಟಗಳ ಮನಶ್ಶಾಂತಿಗೆ ಭಂಗವನ್ನುಂಟುಮಾಡಿದೆ.

ಶ್ರೀ ಸುಬಾಷ್ ಬೋಸರ ಭಾಷಣ.

ಭಾರತವು ಇನ್ನೂ ಕಚ್ಚಾ ವಸ್ತುಗಳನ್ನು ಸರಬರಾಯಿ ಮಾಡುವುದಿಲ್ಲ. ಅದು ಉಚ್ಚ ರೀತಿಯಲ್ಲಿ ಪ್ರಪಂಚದ ಸೇವೆ ಮಾಡಲಿಚ್ಛಿಸುತ್ತದೆ

ಈ ತಾ. 6ರಲ್ಲಿ ಆಸ್ಟ್ರಿಯಾದ ಮುಖ್ಯ ಪಟ್ಟಣವಾದ ವಿಯನ್ನದಲ್ಲಿ ನಡೆದ ಇಂಡಿಯನ್ ಸೆಂಟ್ರಲ್ ಯೂರೋಪಿಯನ್ ಸೊಸೈಟಿಯ ಮಹಾ ಸಭೆಯಲ್ಲಿ ಶ್ರೀಯುತ ಸುಬಾಷ್ ಚಂದ್ರಬೋಸ್‌ರವರು ಭಾಷಣ ಮಾಡುತ್ತಾ ಹೇಳಿದ್ದೇನೆಂದರೆ:—

'ಇಂದು ಭಾರತಕ್ಕೆ ಪ್ರಪಂಚದ ಇತರ ಭಾಗಗಳೊಂದಿಗೆ ಅನ್ಯೋನ್ಯ ಸಂಪರ್ಕತೆಯು ಅಗತ್ಯವಾಗಿದೆ. ಇನ್ನು ಮುಂದಕ್ಕೆ ಬರೇ ಇಂಗ್ಲೆಂಡಿನೊಂದಿಗೇ ಅದರ ಕಲ್ಯಾಣಾಭ್ಯುದಯವು ನಿರೀಕ್ಷಣೆಯಿಲ್ಲ. ಭಾರತವು ಸದ್ಯಕ್ಕೆ ತನ್ನ ಆಂತರೀಕ ವ್ಯವಸ್ಥೆಯ ಸುಧಾರಣೆಯ ಬಗ್ಗೆ ವ್ಯಗ್ನವಾಗಿರುವದಾದರೂ ಅದಕ್ಕೆ ರಾಷ್ಟ್ರ ಸಂಘದ ಒಂದು ಸದಸ್ಯಸ್ಥಾನಕ್ಕೆ ಬಾಧ್ಯತೆ ಇದೆ; ಅಲ್ಲದೆ ಅದು ರಾಷ್ಟ್ರಗಳಲ್ಲಿ ಒಂದು ಪ್ರಧಾನವಾದ ರಾಷ್ಟ್ರವೂ ಆಗಿರುತ್ತದೆ. ಆದ್ದರಿಂದ ಪ್ರಪಂಚದ ವ್ಯವಹಾರದ ಅದು ಒಂದು ಪ್ರಧಾನ ಪಾತ್ರವನ್ನು ವಹಿಸಲು ಬದ್ಧವಾಗಿ ಬಹುತೇಕ ಭಾರತೀಯರಲ್ಲಿ ಇಂದಿನ ನಮ್ಮ ದುಸ್ಥಿತಿಗೆ ಬಾಹ್ಯ ಪ್ರಪಂಚದೊಂದಿಗೆ ಸಮ್ಮಿಳಿತವಾಗದೆ ಪ್ರತ್ಯೇಕವಾಗಿರಿಸಿಟ್ಟದ್ದೇ ಒಂದನೇ ಕಾರಣವೆಂಬ ಭಾವನೆಯುಂಟಾಗಿದೆ. ಇಂಡಿಯಾ ಸೆಂಟ್ರಲ್ ಯೂರೋಪಿಯನ್ ಸೊಸೈಟಿಯು ಆ ತರವೇ ಈ ಭಾವನೆಯ ಪ್ರತ್ಯಕ್ಷ ನಿದರ್ಶನ. ಈ ಸ್ಥಾಪನೆಯ ಹಿಂದೂ ದೇಶಕ್ಕೂ ಮಧ್ಯ ಯೂರೋಪಿಗೂ ಸಂಸ್ಕೃತಿ ವ್ಯವಹಾರದಲ್ಲಿ ಅನ್ಯೋನ್ಯ ಒಳಿಕೆಯನ್ನು ವರ್ಧಿಸಲೆತ್ನಿಸುತ್ತಾ ಅದರಲ್ಲೂ ಪ್ರತ್ಯೇಕವಾಗಿ ಇಂಡಿಯಾ ಮತ್ತು ಆಸ್ಟ್ರಿಯಾ ದೊಳಗೆ ಕಚ್ಚಿನ ಬಳಿಕೆಯನ್ನು ವರ್ಧಿಸಲು ಪ್ರಯತ್ನಿಸುವುದು ಆಸ್ಟ್ರಿಯಾ ದೇಶವು ಮತ್ತು ಅದರ ಮುಖ್ಯ ಪಟ್ಟಣವಾದ ವಿಯನ್ನವೂ ಯೂರೋಪಿನ ಕೇಂದ್ರಸ್ಥಾನವಾಗಿದೆ. ಪ್ರಧಾನ ಯೂರೋಪಿಗೆ ಆಕರ್ಷಣೆಯನ್ನೀಯಲು ಭಾರತದಲ್ಲಿ ವಿವಿಧವಾದ ಸಂಸ್ಕೃತಿಗಳಿವೆ. ಭಾರತವು ಮೊದಲಿನ ಕೀರ್ತಿಯನ್ನು ಸಂಪಾದಿಸತ್ತಲಿದೆ. ಅಲ್ಲಿನ ಶಾಸ್ತ್ರಜ್ಞರು ಮತ್ತು ಜ್ಞಾನಿಗಳು ಪ್ರಪಂಚದಲ್ಲೆಲ್ಲ ತಮ್ಮ ಪ್ರಭಾವನ್ನು ಹರಡಿದ್ದಾರೆ. ಬಾಹ್ಯ ಪ್ರಪಂಚಕ್ಕೆ ಉತ್ಕೃಷ್ಟವಾದವುಗಳನ್ನು ಕೊಡಲು ಭಾರತಕ್ಕೆ ಚೈತನ್ಯವಿದೆ. ವ್ಯಾಪಾರ ವಿಷಯದಲ್ಲಾದರೋ ಇನ್ನು ಎಂದಿನಂತೆ ಕಚ್ಚಾ ವಸ್ತುಗಳನ್ನು ಮಾತ್ರ ವಿಕ್ರಯಿಸುವ ಕೆಲಸಕ್ಕೆ ಭಾರತವು ಇಚ್ಛಿಸುವುದಿಲ್ಲ. ಅದು ಉಚ್ಚ ರೀತಿಯಲ್ಲಿ ಸುಧಾರಿತ ಯೂರೋಪಿನ ಹಾಗೂ ಇಡೀ ಪ್ರಪಂಚದ ಸೇವೆ ಮಾಡಲಿಚ್ಛಿಸುತ್ತದೆ.

ಬಲೂಚಿಸ್ತಾನ ಭೂಕಂಪ ನಿಧಿ.

(ಮುಂದುವರಿದದ್ದು.)

ಕಳೆದ ತಾ. 29 ರಲ್ಲಿ ಬಲೂಚಿಸ್ತಾನದಲ್ಲಿ ಉಂಟಾದ ಭಯಂಕರ ಭೂಕಂಪದ ಅನಾಹುತಕ್ಕೆ ಸಿಕ್ಕಿ ಬಿದ್ದ ನಿರಾಶ್ರಿತರ ಸಹಾಯಕ್ಕಾಗಿ ಈ ಕೆಳಗಿನ ಮಹನೀಯರು ಧನ ಸಹಾಯ ಮಾಡಿರುವರು.

			ರೂ.	ಆ.	ಪೈ.
47	ಮ. ರಾ	ಜಿ. ಯಂ. ಮಂಜನಾಥ ಶೆಟ್ಟಿಯವರು	10	0	
48		ಒಡೆಯರ ಒಂದು	,,	10	0
49		ಹಿತಚಿಂತಕ	,,	5	0
50		ದಯಾಳು	,,	5	0
51	,,	ವಿ. ಲಿಂಗಣ್ಣ ಶೆಟ್ಟರವರು	,,	3	0
52	,,	ಉದಿಯಾಂಡ ಅಂಣಯ್ಯನವರು,	,,	2	0
53	,,	ಯನ್. ಶಂಕರಯ್ಯ	,,	2	0
54	ಮೆಸರ್ಸ್	ಯಂ. ಮುರ್ತುಜಬೈಗ್ ಕೊ.	,,	2	0
55	,,	ಕೊಂಗಂಡ ಮುದ್ದಪ್ಪ	,,	1	0
56	,,	ನೆರವಂಡ ಮಂಡೆಂಣ	,,	1	0
57	,,	ಪೂಜಾರ್ಕರ ರಾಮಪ್ಪ	,,	1	0
58	,,	ಎನ್. ಆರ್. ಗೋಪಾಲಕೃಷ್ಣ	,,	1	0
59	,,	ಅಜ್ಜಮಾಡ ಚಂಗಪ್ಪ	,,	1	0
60	,,	ಬಿ. ಯನ್. ವೀರಭದ್ರಯ್ಯಶೆಟ್ಟಿ	,,	1	0
61	,,	ಯಂ. ಯಂ. ಸಿದ್ದೀಕ್	,,	1	0
62	,,	ವಿ. ಯಸ್. ಚಕ್ರಪಾಣಿಶೆಟ್ಟಿ	,,	1	0
63	,,	ಸಿ. ಆನಂದನ್	,,	1	0
64	,,	ಚೆಟ್ಟಿಮಾಡ ಐಯ್ಯಂಣ	,,	1	0
65	,,	ಚಾಪ್ಪಡ್ಲು ಕಾಳಪ್ಪ	,,	1	0
66	,,	ತೊರೆನೂರು ಬಿ. ದೇವಯ್ಯ	,,	1	0
67	,,	ಕೆ. ಬಿ. ಶಾಂತಮಲ್ಲಪ್ಪ	,,	1	0
68	,,	ಕೊಂಗೆರ ನಂಜಪ್ಪ	,,	1	0
69	,,	ಕೊಡುದರ ಮಾಡಪ್ಪ	,,	1	0
70	,,	ಐಚೆಟ್ಟಿರ ಮಾಚಯ್ಯ	,,	1	0
71	,,	ಕೆ. ಮಲ್ಲಪ್ಪ	,,	1	0
72	,,	ಕ್ಯಾರ ನು ನಾಗಪ್ಪಶೆಟ್ಟಿ	,,	1	0
73	,,	ವಿ. ಬಿ. ಕಾಮತ್	,,	0	8
		ಜುಮ್ಲ		57	8
		ಹಿಂದಿನ ಜಮಾ		59	8
		ಒಟ್ಟು		117	0

115 ರೂಪಾಯಿಯನ್ನು ತಾ. 20ರಲ್ಲಿ ಸಿಂಧ್ ಪ್ರಾಂತಿಕ ಕಾಂಗ್ರೆಸ್ ರಿಲೀಫ್ ಕಮಿಟಿಗೆ ಕಳುಹಿಸಲಾಗಿದೆ.

ಪಿ. ಐ. ಬೆಳ್ಯಪ್ಪ.

ರೂಪಾಯಿಯನ್ನು ಕರಗಿಸಿದರೆ ಲಾಭವೆ? ನಷ್ಟವೆ?

ರೂಪಾಯಿ ಬೆಲೆಯು ನೋಟೇ?

ಮೆಕ್ಸಿಕೋ ದೇಶದಲ್ಲಿ 'ಪೆಸೊ' ಎಂಬ ನಾಣ್ಯವು ಬೆಳ್ಳಿಯ ನಾಣ್ಯವು ಜಲಪವಣೆಯಲ್ಲಿ ಅದು ಸುಮಾರು 350 ಅಮೇರಿಕದ ಡಾಲರುಗಳಿಗೆ ಸವ. ಯುನೈಟೆಡ್ ಸ್ಟೇಟ್ಸ್ ಸರಕಾರದವರು ಬೆಳ್ಳಿಯ ಬೆಲೆಯನ್ನು ಹೆಚ್ಚಿಸಿ ಅವನ್ನು ಕೊಳ್ಳತ್ತಿದ್ದುದರಿಂದ ಮೆಕ್ಸಿಕೋ ಜನರು ತಮ್ಮ ನಾಣ್ಯಗಳನ್ನು ಕರಗಿಸಿ ಬೆಳ್ಳಿಮಾಡಿ ಯುನೈಟೆಡ್ ಸ್ಟೇಟ್ಸ್‌ಗೆ ಸೂರಲು ಆರಂಭಿಸಿದರು. ಒದ್ದರಿಂದ ಮೆಕ್ಸಿಕೋ ದೇಶದಲ್ಲಿ ಬೆಳ್ಳಿಯ ನಾಣ್ಯದ ಸುಳಿವೇ ಕಡಿಮೆಯಾಗುತ್ತ ಒಂಟು. ಆ ದ್ದೇಶದ ಪ್ರಯತ್ನವದವರು ಇದನ್ನು ನೋಡಿ ಬೆಳ್ಳಿ, ನಾಣ್ಯದ ಚಲಾವಣೆಯನ್ನೇ ನಿಲ್ಲಿಸಿಬಿಟ್ಟರು. ನಾಣ್ಯಕ್ಕೆ ಬದಲಾಗಿ ಕಾಗದದ ನೋಟುಗಳನ್ನು ಮಾಡಿದರು. ಅಷ್ಟೇ ಅಲ್ಲದೆ 30 ದಿನಗಳೊಳಗಾಗಿ ಪ್ರಜೆಗಳೆಲ್ಲ ತಮ್ಮಲ್ಲಿದ್ದ ಬೆಳ್ಳಿಯ ನಾಣ್ಯಗಳನ್ನು ಸರಕಾರದ ಖಜಾನೆಗಳಲ್ಲಿ ಮಟ್ಟಿಸಿಬಿಡಬೇಕೆಂಬ ಆಜ್ಞೆಯನ್ನೂ ಮಾಡಿದರು

ಇಂತಹ ಸ್ಥಿತಿ, ಇಂತಹ ಉಪಾಯವು ಭಾರತ ದೇಶದ ಬೆಳ್ಳಿಯ ರೂಪಾಯಿಗೂ ಸಂಭವಿಸಬಹುದೇನೋ ಎಂದು ಹಲವರು ಶಂಕೆ ಪಡುತ್ತಿದ್ದಾರೆ. ಅವು ಸಂದೇಹಗಳಿಗೆ ಆಧಾರವೇನೆಂಬದನ್ನು ವಿಚಾರಿಸೋಣ.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸರಕಾರದವರು ಬೆಳ್ಳಿಯನ್ನು ಎಷ್ಟು ಕೊಂಡರೂ 1 ಔನ್ಸಿಗೆ 1.29 ಡಾಲರ್‌ಗಿಂತಲೂ ಹೆಚ್ಚಿನ ಬೆಲೆಗೆ ಕೊಳ್ಳಕೂಡದೆಂದು ರಜಿತ ಕ್ರಯ ಶಾಸನ ಪ್ರಕಾರ ನಿರ್ಣಯಿಸಿದ್ದಾರೆ.

ಈಗ 285 ರೂಪಾಯಿಗಳು 100 ಡಾಲರುಗಳಿಗೆ ಸಮ.

ಆದ್ದರಿಂದ ಒಂದು ಡಾಲರು 2 85 ರೂಪಾಯಿಗೆ ಸಮಾನ; ಅಂದರೆ ರೂ. 2—13—5 ಅಂದ ಹಾಗಾಯಿತು.

ಒಂದು ಔನ್ಸು ಬೆಳ್ಳಿಗೆ 1 2 ಡಾಲರಿಂದ ಹೆಚ್ಚಿನ ಬೆಲೆಗೆ ಅಮೇರಿಕದ ಸಂಕಲ್ಪವನ್ನು ಕೊಳ್ಳಲಾಗದು ಒಂದು ಡಾಲರಿಗೆ ರೂ. 2-13-5ರಂತೆ 1.29 ಡಾಲರ್‌ಗೆ ರೂ 3-10-6 ಬೆಲೆಯಾಗುವದು. ಒಂದು ಔನ್ಸು ಅಂದರೆ 24 ತೊಲ ಬೆಳ್ಳಿಗೆ ರೂ. 3-10-6 ಆಗವದು. ಅಂದರೆ 1 ತೊಲೆಗೆ 1 ರೂ. 8 ಆಣೆ ನಾಲ್ಕಾಣೆ ಪೈ ಪರೀಕ್ಷೆಯೊದಲಾಗಿತ್ತು.

16 ಆಣೆ ತೂಕದ ಬೆಳ್ಳಿಗೆ 1 ರೂ. 8 ಆಣೆ ನಾಲ್ಕಾಣೆ ಪೈ ಬೆಲೆಯಾದರೆ 1 ಆಣೆ ತೂಕಕ್ಕೆ 0-1-6 ಪೈ ಆಗುವದು.

ಒಂದು ರೂಪಾಯಿಯನ್ನು ಕರಗಿಸಿದರೆ 0-11-8 ಪೈಗಳ ತೂಕ ಬೆಳ್ಳಿ ಮಾತ್ರ ಸಿಕ್ಕುವದು. ಮಿಕ್ಕದ್ದು ಶಾಮ್ಯ. ಒಂದು ಆಣೆ ತೂಕ ಬೆಳ್ಳಿಗೆ 0-1-6 ಪೈ ಆದರೆ 0-14-8 ಪೈ ತೂಕದ ಬೆಳ್ಳಿಗೆ ರೂ. 1-6-0 ಆಗುವದು

ಇಂಡಿಯಾ ದೇಶದಲ್ಲಿ ಯಾವಾಗ ರೂಪಾಯಿಯನ್ನು ಕರಗಿಸಬಹುದೆಂದರೆ ಆಣೆ ತೂಕ ಬೆಳ್ಳಿಗೆ 0-1-6 ಪೈ ಬೆಲೆಯಾದಾಗ. ಆಗ ತೊಲ ಒಂದಕ್ಕೆ ರೂ. 1-1-4 ರಂತೆ ಮಾರಬಹುದು.

ಬೆಳ್ಳಿಯ ಬೆಲೆ ಹೆಚ್ಚಿ ರೂಪಾಯಿಯನ್ನು ಕರಗಿಸುವ ಸಮಯ ಜನರಿಗೆ ಒದಗಬಹುದೆಂಬ ಭಯದಿಂದಲೇ ಇಂಡಿಯಾ ಸರ್ಕಾರದವರೂ ರೂಪಾಯಿಗೆ ಬದಲಾಗಿ ಕಾಗದದ ನೋಟನ್ನು ಹೊರಡಿಸುವರೆಂಬ ಬಲವಾದ ವದಂತಿ ಇದೆ.

ಪ್ರ. ಮ.

ಸೊಳ್ಳೆಗಳನ್ನಡಗಿಸುವ ಕೆಲವು ಸುಲಭೋಪಾಯಗಳು.

ಸೊಳ್ಳೆಗಳ ಕಡಿತದಿಂದಲೇ ಮನುಷ್ಯರಿಗೆ ಮಲೇರಿಯಾ ಜ್ವರವು (ಅಥವಾ ಮೊರೆ ಜ್ವರವು) ಬರುವುದೆಂಬುವುದು ಸರ್ವ ಸಾಮಾನ್ಯವಾಗಿ ಎಲ್ಲರಿಗೂ ತಿಳಿದುದೇ. ಸೊಳ್ಳೆಗಳ ಜಾತಿಗಳಲ್ಲಿ ಅನಾಫಲೀಸ್ ಎಂಬ ಒಂದು ಜಾತಿಯ ಸೊಳ್ಳೆಯು ಈ ರೋಗದ ಸೊಂಕನ್ನು ತನ್ನ ಮೂಲಕವಾಗಿ ಅಂಟಿಸಿಕೊಂಟು ಒಂದು ಮನುಷ್ಯರನ್ನು ಕಚ್ಚಿದಾಗ, ಆ ಸೊಂಕು ಮನುಷ್ಯರಕ್ತಕ್ಕೆ ಸಂಬಂಧಿಸಿ ಅದರಿಂದ ಆ ವ್ಯಾಧಿಯು ತಲೆದೋರುವುದು. ಅವಾಯಕರವಲ್ಲದ ಸಾಧಾರಣದ ಸೊಳ್ಳೆಗಳಾದರೂ ಜನರಿಗೆ ಅವುಗಳಿಂದ ತೊಂದರೆಗಳು ತಪ್ಪಿದುದಲ್ಲ. ಈ ಸೊಳ್ಳೆಗಳನ್ನಡಗಿಸುವುದಕ್ಕಾಗಿ ಅಲ್ಲಲ್ಲಿ ಮುನ್ಸಿಪಾಲಿಟಿಯವರು ಹಲವು ಮಾರ್ಗೋಪಾಯಗಳನ್ನು ಕಲ್ಪಿಸುತ್ತಿರುವರು. ಅದಕ್ಕಾಗಿ ಎಷ್ಟೋ ಹಣವನ್ನು ವೆಚ್ಚ ಮಾಡಿ ಶ್ರಮ ಪಡುತ್ತಿರುವರು. ಅವನ್ನೆಲ್ಲ ಇಲ್ಲಿ ವಿವರಿಸುವುದು ನನ್ನ ಉದ್ದೇಶವಲ್ಲ. ಹಳೆಯ ಟೀನು ತಗಡಕ್ಕೆ ಹಳ್ಳ ಕೊಳ್ಳಗಳನ್ನೆಲ್ಲ ಮುಚ್ಚಿಸುವುದು, ನೆಲದೊಳಗೆ ಮುಚ್ಚಿದ ಚರಂಡಿಗಳನ್ನು ಕಟ್ಟಿಸುವುದು, ಸೀಮೆಯೆಣ್ಣೆ ಅಥವಾ ಬೇರೆ ವಿಧವಾದ ಕ್ರಿಮಿಹಾರಕ ವಸ್ತುಗಳಿಂದ ಸೊಳ್ಳೆಗಳ ಮೊಟ್ಟೆ ಮುಂ ಮುಂತಾದವುಗಳನ್ನು ನಾಶ ಮಾಡುವುದು, ಇವೇ ಮೊದಲಾದ ವಿವಿಧ ಮಾರ್ಗಗಳು ಮುನ್ಸಿಪಾಲಿಟಿಯಿಂದ ನಡೆಸಲ್ಪಡುತ್ತಿವೆ. ಆದರೆ ಇವೆಲ್ಲ ಸಾಧಾರಣವಾಗಿ ಎಲ್ಲರಿಗೂ ಸಾಧ್ಯವಾದ ಕಾರ್ಯಗಳಲ್ಲ. ಅದರಲ್ಲಿ ಕಷ್ಟವೂ, ವೆಚ್ಚವೂ ಅಧಿಕವಾಗುವುದು. ಈಗ ನಾನು ಹೇಳುವ ಒಂದೆರಡು ಮಾರ್ಗಗಳು ಕೇವಲ ಗರೀಬರು ಮೆನಿದಲುಗೊಂಡು ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ಸುಲಭವಾಗಿ ನಡಿಸಿ ಕೊಳ್ಳತಕ್ಕ ಉಪಾಯಗಳಾಗಿವೆ. ಇದರಿಂದ ಮನೆಯಲ್ಲಿ ಸೊಳ್ಳೆಗಳ ಕಾಟವು ಬಹಳ ಮಟ್ಟಿಗೆ ಕಳ್ಳಿಮೊಳಗಾಗುವುದರಲ್ಲಿ ಸಂದೇಹವಿಲ್ಲ.

ಪ್ರಾರಂಭಕವಾಗಿ ಸೊಳ್ಳೆಗಳ್ಲು ಮನೆಯಲ್ಲಿ ತೀವ್ರವಾದ ನಿತ್ಯ ಕತ್ತಲೆಯೊದ ಪ್ರದೇಶಗಳನ್ನೇ ಹುಡುಕಿ, ಅಲ್ಲಿ ವಾಸ ಪ್ರವೃತ್ತವಾಗುತ್ತವೆ ಇಂಥ ಪ್ರದೇಶಗಳಲ್ಲಿ ವಿಶ್ರಾಂತಿ ತೆಗೆದುಕೊಂಡು, ರಾತ್ರಿಯಾದೊಡನೆ ಸಂಚಾರಕ್ಕೆ ಹೊರಡುವುದು. ನೀರು ತುಂಬಿದ ಮಡಕೆ, ಒಡ್ಡಲು ಮನೆ, ಕತ್ತಲುಕೋಣೆ, ಗೂಟಕ್ಕೆ ತಗಲು ಹಾಕಿದ ಅಂಗಿ, ಟೋಪಿ ಮೊದಲಾದ ಉಡುಪುಗಳ ಹಿಂದೆ ಕತ್ತಲೆಯಲ್ಲಿರುವ ಭಾಗಗಳು ಅಲ್ಲಲ್ಲಿನ ಮೂಲೆಗಳಲ್ಲಿ ಸಂಗ್ರಹಿಸಿಟ್ಟ ಕಸಗಳ ರಾಶಿ ಕಾರ್ಪೆಟ್, ಬೆಡ್ಡು ಮುಂತಾದ ಮೆತ್ತವಟ್ಟು, ಪಾತ್ರೆಪಗಡಗಳ ಒಳಭಾಗಗಳು, ಇವೇ ಸೊಳ್ಳೆಗಳಿಗೆ ಆಶ್ರಯ ಸ್ಥಾನಗಳು. ಮುಖ್ಯವಾಗಿ ಕರಿಯ ಬಣ್ಣವೂ ಕತ್ತಲೆಯೂ ಅವುಗಳಿಗೆ ಪ್ರಿಯವಾಗಿವೆ. ಬಿಳಿಯ ಬಟ್ಟೆಗಳು, ಬಿಳಿಯ ಗೋಡೆಗಳು, ನಿಳೀ ಬಣ್ಣ ಹಾಕಿದ ಮನೆಯ ಸಾಮಾನುಗಳು, ಇವುಗಳನ್ನು ಸೊಳ್ಳೆಗಳು ಅಷ್ಟಾಗಿ ಪ್ರೀತಿಸುವುದಿಲ್ಲ. ಅಷ್ಟೇಕೆ? ಕಪ್ಪು ಬಣ್ಣದ ಕಾಲು ಚೀಲ, ಅಂಗಿ, ಮೊದಲಾದ ಉಡುಪುಗಳನ್ನು ಧರಿಸಿದವರ ಮೇಲೆ ಸೊಳ್ಳೆಗಳ ಬೀಳುವ ಹಾಗೆ, ಬಿಳೀ ಉಡುಪನ್ನುಟ್ಟ ಜನರ ಮೇಲೆ ಬೀಳುವುದಿಲ್ಲ. ಇದು ಪ್ರತಿದಿನವಲ್ಲಿ ಜನರಿಗೆ ಅನುಭವದ್ದಾಗಿ ತಿಳಿದೇ ಇದೆ. ಒಳ್ಳೆಗಾಳಿ ಬೆಳಕಿಗೆ ಅವಕಾಶವಿದ್ದ, ಬಿಳಿಯ ಸಾಮಾನುಗಳನ್ನೇ ಇಟ್ಟಿರುತಕ್ಕ ಕೋಣೆಗಳಲ್ಲಿ ಅಷ್ಟಾಗಿ ಸೊಳ್ಳೆಗಳ ಕಾಟವು ಇರುವುದಿಲ್ಲ. ಅಲ್ಲಲ್ಲಿ ಬಟ್ಟೆಗಳನ್ನು ಗೂಟಕ್ಕೆ ತೂಗು ಹಾಕದೆ, ಬುಟ್ಟಿಗಳಲ್ಲಿ ಹಾಕಿ ಮುಚ್ಚಿಟ್ಟರೆ ಸೊಳ್ಳೆಗಳು ಸೇರುವುದಿಲ್ಲ. ಸೊಳ್ಳೆಗಳನ್ನು ಕೊಲ್ಲುವುದಕ್ಕಾಗಿ ಫ್ಲಿಟ್, ಕೆಟಾಲ್, ಮುಂತಾದ ಗಳನ್ನು ಈಗ ಅನೇಕರು ಉಪಯೋಗಿಸುವರು. ಆದರೆ ಇವುಗಳಿಗೆ ಬೆಲೆ ಹೆಚ್ಚಾದುದರಿಂದ, ಎಲ್ಲರಿಗೂ ಇದನ್ನು ಉಪಯೋಗಿಸಲು ಸಾಧ್ಯವಲ್ಲ. ಅಲ್ಲದೆ, ಈ ಔಷಧ ಪ್ರಯೋಗಗಳಿಂದ ಕ್ರಿಮಿಗಳು ಸ್ವಲ್ಪ ಹೊತ್ತಿನ ವರೆಗೆ ಮೃತಪ್ರಾಯಗಳಾಗಿದ್ದು ತಿರುಗಿ ಚೇತರಿಸಿಕೊಳ್ಳುವುದೂ ಉಂಟು, ಆದುದರಿಂದ ಅವುಗಳು ಸೊಳ್ಳೆಗಳನ್ನು ಸಂಪೂರ್ಣವಾಗಿ ಕೊಲ್ಲುವ ಸಂಭವವು ಕಡಿವೆ. ಈ ಔಷಧಗಳನ್ನೂ, ಹೊಗೆ ಗಳನ್ನೂ ಹಾಕಿದೊಡನೆ ಸೊಳ್ಳೆಗಳು ಆ ಕೋಣೆಗಳಿಂದ ಕಿಟಿಕಿಗಳ ಮೂರ್ಗವಾಗಿ ಹೊರಬಂ ಹೋಗಿ, ಆ ವಿಷದ ಘಾಟು ತಗ್ಗಿದೊಡನೆ ತಿರುಗಿ ಅದೇ ಕಿಟಿಕಿಗಳ ಮುಖಾಂತರ ಒಳಕ್ಕೆ ಬರುವವು. ಆದುದರಿಂದ ಈ ವಿಷಯವನ್ನು ವಿವರಿಸುವ ಕೆಲವು ಮಾರ್ಗಗಳು ಸರ್ವ ಸುಲಭವಾಗಿ, ಸೊಳ್ಳೆಗಳ ಹಾವಳಿಯನ್ನು ತಪ್ಪಿಸುವುದಕ್ಕೆ ಬಹಳ ಮಟ್ಟಿಗೆ ಅನುಕೂಲವಾಗಿ ತೋರುತ್ತಿದೆ.

ಸಾಧಾರಣವಾಗಿ ಕೆಲವು ಮುಖ್ಯವಾದ ಮಡಕೆಗಳನ್ನೇ ಸೊಳ್ಳೆಗಳನ್ನು ಹಿಡಿಯುವ ಬೋನುಗಳಂತೆ ಉಪಯೋಗಿಸಬಹುದು. ಕರೀ ಮಡಿಕೆಯನ್ನು ಕಂಡು ಅವರ ಹೊರ ಭಾಗಕ್ಕೆ ತೂತ್ ಸುಣ್ಣವನ್ನು ಬಳಿದು ಬಿಳಿಯಾಗಿ ಮಾಡಬೇಕು. ಆ ಮಡಕೆಯನ್ನು ಸೊಳ್ಳೆಗಳು ಹೆಚ್ಚಾಗಿ ಬರಬಹುದೆಂದು ತೋರುವ ಸ್ಥಳದಲ್ಲಿಡಬೇಕು. ಅವರೆ ಆ ಮಡಕೆಯನ್ನಿಡತಕ್ಕ ಕೋಣೆಯಲ್ಲಿ ಅಥವಾ ವಸಾರದಲ್ಲಿ, ಸೊಳ್ಳೆಗಳು ಬಂದು ತಂಗತಕ್ಕ ಬೇರೆ ಆಶ್ರಯ ವಸ್ತುಗಳು ಎಂದರೆ, ಪೆಟ್ಟಿಗೆಗಳು, ಗೂಟದಲ್ಲಿ ತೂಗು ಹಾಕಿದ ಬಟ್ಟೆಗಳು ಮುಂತಾತಾದುವೊಂದೂ ಇಲ್ಲದಂತೆ, ಅವನ್ನೆಲ್ಲ ಬೇರೆ ಕಡೆಗೆ ಸಾಗಿಸಿಡಬೇಕಾದುದು ಅತ್ಯವಶ್ಯವು. ನೀರು ತುಂಬಿದ ಬೇರೆ ಪಾತ್ರೆಗಳನ್ನೆಲ್ಲ ಮುಚ್ಚಿಡಬೇಕು. ಆಗ ಸೊಳ್ಳೆಗಳಿಗೆ ಬೇರೆ ಆಶ್ರಯವಿಲ್ಲದುದರಿಂದ ಅವೆಲ್ಲ ಆ ಮಡಕೆಯೊಳಗೆ ಬಂದು ಸೇರುವವು. ಬೆಳಗಾದೊಡನೆ ಆ ಮಡಕೆಯೊಳಗೆ ಹೆಚ್ಚು ಸೊಳ್ಳೆಗಳು ಬಂದು ಸೇರಿರುವುದನ್ನು ಕಾಣಬಹುದು ಆಗ ಆ ಮಡಕೆಯ ಮೇಲೆ ಒಂದು ತಟ್ಟೆಯನ್ನು ಮುಚ್ಚಿಟ್ಟು, ಅವನ್ನು ಒಳ್ಳೇ ಬಿಸಿಲು ಕಾಯುವ ಸ್ಥಳಕ್ಕೆ ತಂದಿಟ್ಟರೆ ಸೊಳ್ಳೆಗಳು ಸಾಯುವುವು. ಆ ಥವಾ ಆ ಮಡಕೆಯೊಳಕ್ಕೆ ಸ್ವಲ್ಪ ಸೀಮೆಎಣ್ಣೆಯನ್ನು ಸುರಿದರೂ ಅವು ಸಾಯುವವು

ಸೊಳ್ಳೆಗಳನ್ನಡಗಿಸುವುದಕ್ಕೆ ಬೇರೊಂದು ಸುಲಭೋಪಾಯವೂ ಉಂಟು. ಇದು ನನ್ನ ಸ್ವಾನುಭವದಿಂದ ಬಹಳ ತೃಪ್ತಿಕರವಾಗಿಯೂ ಕಂಡು ಬಂದಿದೆ. ಬಾಣಲೆ ಅಥವಾ ತಾರಬಾಳದ ಹಾಗೆ ಆಗಲುವಂತಹ ಒಂದು ತಟ್ಟೆಯನ್ನು ತಂದು ಅದರ ಒಳಭಾಗಕ್ಕೆಲ್ಲ ಹರಳೆಣ್ಣೆಯನ್ನು ಸವರಿಡಬೇಕು. ಆ ರೀತಿ ಮನೆಯಲ್ಲಿ ಸೊಳ್ಳೆಗಳು ಬಂದು ತಂಗುವತಕ್ಕ ಒಟ್ಟೆ ಬರೆ ಕುರ್ಚಿ ಮುಂತಾದ ಸಾಮಾನುಗಳನು ಕದಲಿಸಿದರೆ, ಅಲ್ಲಿ ಸೇರಿದ್ದ ಸೊಳ್ಳೆಗಳೆಲ್ಲಾ ಆ ಸ್ಥಳವನ್ನು ಬಿಟ್ಟು ಹಾರಲಾರಂಭಿಸುವುವು. ಆಗ ಎಣ್ಣೆ ಸವರಿದ ತಟ್ಟೆಯನ್ನು ಸೊಳ್ಳೆಗಳು ಹಾರುವ ಸ್ಥಳದಲ್ಲಿ ಬೇಗದಲೆ ಅನೇಕ ಸೊಳ್ಳೆಗಳು ಆ ತಟ್ಟೆಯಲ್ಲಿ ರುವ ಎಣೆಯ ಜಿಡ್ಡಿಗೆ ಅಂಟಿಬಿಡುವವು. ಆಗಾಗ ಈ ಉಪಾಯವನ್ನು ಮಾಡುತ್ತ ಬಂದರೆ, ಸ್ವಲ್ಪ ದಿನಗಳೊಳಗಾಗಿ ಬಹಳ ಮಟ್ಟಿಗೆ ಸೊಳ್ಳೆಗಳ ಕಾಟವು ಕಡಿಮೆಯಾಗುವುದು.

'ರಾ. ಬ.'

ನವೀನ ವಿದ್ಯೆ ಮತ್ತು ಅನಾಗರಿಕತೆ.

ಲೇಖಕ—ಪಿ. ಯಂ. ದಾಸ್, ಪೊನ್ನಂಪೇಟೆ ಶಾಲೆಯ ವಿದ್ಯಾರ್ಥಿ.

ಪ್ರತಿಯೊಬ್ಬ ಮಾನವನು ತನ್ನ ಪುರಾಣ ಶಾಸ್ತ್ರದ ಸ್ವಾಧಾರ ಇಹಲೋಹಕದಲ್ಲಿ ಸುಖವನ್ನು ಗಳಿಸಿದರೆ, ಆತನಿಗೆ ಪರಲೋಕದಲ್ಲಿ ಸುಖವನ್ನು ಗಳಿಸಲು ಸಾಧ್ಯವಾಗುತ್ತದೆಂದು ತಿಳಿದಿರುವನು; ಆದರೆ ಇಂಥಾ ಮಹತ್ವವಾದ ಕಾರ್ಯವನ್ನು ಕೈಗೊಳ್ಳಲು ಪ್ರತಿಯೊಬ್ಬನಿಗೂ ಶಾಸ್ತ್ರೋಕ್ತವಾದ ವಿದ್ಯೆಯು ಬೇಕು. ಇವರ ಸಹಾಯವಿಲ್ಲದೆ ಲೌಕಿಕ ಮತ್ತು ಪಾರಮಾರ್ಥಿಕಗಳ ವಿಷಯ ಹೆಚ್ಚಾಗಿ ತಿಳಿಕೆಗಳನ್ನು ಅರಿತುಕೊಂಡು ತನ್ನ ಜೀವನವನ್ನು ತಾನೇ ರೂಪಿಸಿಕೊಳ್ಳಲು ಸುಲಭಸಾಧನವಾಗುವುದು. ಇಂಥಹ ವಿದ್ಯೆಯನ್ನು ಕೇವಲ ಹುಬ್ಬೆಗಾಗಿ ಓದಿ ತಾತ್ಕಾಲಿಕವೆಂಬ ಹೊರತು ಶಾಶ್ವತವಾದ ಜ್ಞಾನವನ್ನು ಅರಿತುಕೊಳ್ಳುವುದಕ್ಕೆ ಸಹಾಯವಾಗುವುದಿಲ್ಲ. ಈಗಿನ ಬಾಲಕ ಬಾಲಕಿಯರುಗಳು ಶಾಲೆಗೆ ಹೋಗಿ ನಾಲ್ಕಾರು ಅನ್ಯಭಾಷಾ ಪುಸ್ತಕಗಳನ್ನು ಮುಗಿಸಿ ವಿದೇಶೀಯರ ನಡೆನುಡಿಗಳನ್ನು ಅನುಕರಣ ಮಾಡಿ ಒಂದು ಪದವಿಗೆ ಸಲ್ಲುವರು ವಿದ್ಯಾವಂತರಾಗಲಿಲ್ಲ. ಹಿಂದುಗಳಾದ ನಾವು ಪಾಶ್ಚಿತ್ಯರ ಶಿಕ್ಷಣವನ್ನು ಹೊಂದಿ ಮಾತ್ರಕ್ಕೆ, ಅನಾದಿಕಾಲದಿಂದಲೂ ಬಂದಿರುವ ನಮ್ಮ ಆರ್ಯ ಧರ್ಮವನ್ನು ತುಚ್ಛೀಕರಿಸುವುದು ಭಾರತೀಯರಾದ ನಮಗೆ ತಕ್ಕುದಲ್ಲ. ಅದರ ಮಾತ್ರಕ್ಕೆ ಪಾಶ್ಚಿಮಾತ್ಯರ ವಿಚಾರವನ್ನೇ ವಿಡಬೇಕೆಂದು ಇದರ ತಾತ್ಪರ್ಯವಲ್ಲ. ಅವರಲ್ಲಿರುವ ಪಾತ್ರ ನಮ್ಮಲ್ಲಿಗಳಾದ ಗುಣಗಳನ್ನು ಎಂದೆ, ಉದ್ಯೋಗಶೀಲತೆ, ಸಂಘ ಶಕ್ತಿ, ದೇಶದ ಸಂಪದಭಿವೃದ್ಧಿಯ ಮೇಲೆ ತೆರುವ ಪ್ರೀತಿಗಳಿವ ಅಭಿಮಾನ ಇವುಗಳನ್ನು ವಾದರಿಯಾಗಿಟ್ಟುಕೊಂಡು, ತನ್ನ ತನ್ನ ಕರ್ತವ್ಯಗಳನ್ನು ತಾವಾಗಿಯೇ ಸಂತೋಷವಾಗಿ ನೆರವೇರಿಸಲಿಕ್ಕೆ ಅಭ್ಯಾಸಮಾಡಬೇಕು. ಆದರೆ ಈಗಿನ ವಿದ್ಯಾರ್ಥಿಗಳಲ್ಲಿ ಕಾಮ, ಕ್ರೋಧ, ಮೋಹ, ಮದ, ಮತ್ಸರ ಮೊದಲಾದ ಅಷ್ಟರಿಷ್ಟಂಗಳು ನೆಲಸಿ ತಮ್ಮ ತಮ್ಮ ಕರ್ತವ್ಯ ಶಕ್ತಿಯನ್ನು ವಹಿಸಿಕೊಳ್ಳಲಿಕ್ಕೆ ಸಾಮರ್ಥ್ಯವೂ, ಧೈರ್ಯವೂ, ಬಲಸಂಕಲ್ಪವೂ ಇಲ್ಲದೆ ತಮ್ಮ ತೇಜಸ್ಸನ್ನು ಎಳೆಯತನದಲ್ಲಿಯೇ ಕಳೆದುಕೊಂಡು ಅವಿತ್ಯದಲ್ಲಿ ತಮ್ಮ ತಮ್ಮ ವಂಶಾಕುವನ್ನೇ ನಾಶವಾಡುವ ಕುಲದ್ರೋಹಿಗಳಾಗುತ್ತಾರೆ. ಇವಲ್ಲದೆ ತಂಬಾಕು, ಎಲೆ ಅಡಿಕೆ, ಚಹಾ, ಶುಚಿತ್ವ, ಶ್ರದ್ಧಾಭಕ್ತಿಗಳ ತಲೆಮಟ್ಟಿ, ಸ್ವಸ್ಥ ಸಹನಾಶಕ್ತಿಯಿಂದಲೂ ಅನೇಕ ವಿಕಟ ಪುಸ್ತಕಗಳ ಸಹವಾಸದಿಂದಲೂ ಇವುಗಳ ಸ್ವಾಸ್ಥ್ಯವು ಶಿಥಿಲಗೊಂಡು ದುರ್ಬಲ ಮಾನಸಿಕ ಕ್ರಿಯೆಯು ಮತ್ತು ದುರಾಲೋಚನೆ ಇವುಗಳಲ್ಲಿಯೇ ಅಸಕ್ತಿಯುಳ್ಳವರಾಗಿ ದುರ್ಬುದ್ಧಿಯನ್ನು ಎಳ್ಳಷ್ಟೂ ಶ್ರಮವಿಲ್ಲದೆ ತಮ್ಮ ತಮ್ಮ ಇಷ್ಟ ಪ್ರವೃತ್ತಿಯಿಂದ ಮನಬಂದಂತೆ ಸಂಚಾರಮಾಡುವವರಾಗಿದ್ದಾರೆ. ಇವಕ್ಕೆಲ್ಲಾ ಇಷ್ಟ ಅತ್ಯಾವಶ್ಯಕವಾಗಿ ಬೇಕಾಗಿರುವುದೆಂದರೆ, ಮುಖ್ಯವಾಗಿ ಗುರುಕುಲ ವಿದ್ಯಾಶಿಕ್ಷಣವಲ್ಲದೆ ಬೇರಿಲ್ಲವೆಂದು ತೋರುವುದು.

ಇಷ್ಟರಿಂದ ನೈಸರ್ಗಿಕ ಪ್ರಪಂಚದ ಲೌಕಿಕ ವಿಷಯಗಳಲ್ಲಿ ಇಷ್ಟಾನಿಷ್ಟಗಳಾಗಿವೆ. ನಾವಿನ ವಿದ್ಯೆಯ ಸಂಪರ್ಕದಿಂದ ಲೌಕಿಕದಲ್ಲಿ ತಲೆಯೆತ್ತಿ ನಾಗರೀಕತೆಯು ವಿಶಾಲತೆಯಕ್ಕೆ ಹೋಗಲು ಸಹಾಯಕವಾಗಿರುವುದಾದರೂ, ಹುಚ್ಚಿಕೆ, ಸಂಪತ್ತಿನಿಂದ ಸೊಕ್ಕಿ ಸೊಕ್ಕಿ ಇನ್ನೊಬ್ಬರ ವ್ಯಕ್ತಿಪಾವಾದ ವಿಚಾರಗಳಿಗೆ ಪ್ರಾಧಾನ್ಯವಿಲ್ಲದೆ ಸ್ವಾರ್ಥಪರತೆ, ಮಮಕಾರ ಸ್ವೇಚ್ಛಾಚಾರ, ಇವುಗಳಲ್ಲಿ ಮಾತ್ರ ಆಸಕ್ತರಾಗಿ ತನ್ಮಂತೆಯೇ ಇತರರು ಎಂಬ ಸಂಬಂಧಿಕೆಯನ್ನು ಇನ್ನೂ ಅರಿತಿಲ್ಲ. ಆದುದರಿಂದ ಲೋಕದಲ್ಲಿ ಅಶಾಂತಿಯು ತಲೆದೋರಿ ಸಕಲ ಜನರು ವಿದ್ಯಾಬುದ್ಧಿ ಕೌಶಲ್ಯವಿದರಾಗಿ ಸಂಘ, ಸಭೆ, ಸಮ್ಮೇಲನ, ಪಂಚತ್ವಗಳು ಮೊದಲಾದ ಕೂಟಗಳ ಅಭ್ಯುದಯವೇ ಕಾಣುತ್ತಿರುವುದು. ಅವರಲ್ಲಿಯೂ ಹಿಂದೊಂದು ರಾಷ್ಟ್ರದವರು ಒಂದೊಂದು ಶಾಖೆಯನ್ನಾಗಿ ವಹಿಸಿ ಬೇರೆ ಬೇರೆಯಾಗಿ ಏರ್ಪಟ್ಟು, ದೇಶೋನ್ನತಿಗಾಗಿ ಬಹುವಾಗಿ ಹೊಡೆದಾಡುತ್ತಿರುವುದು ಮತ್ತೂ ವಿಶೇಷವಾಗಿದೆ. ಆವುದು? ವೈದ್ಯರು ಹೆಚ್ಚಿದರೂ ರೋಗಿಗಳು ಹೆಚ್ಚುತ್ತಾರು' ಎಂಬ ಬಲ್ಲವರ ಬೆಲ್ಲದಮಾತಿನಂತೆಯೂ ಸಂಭವಿಸಿರುವುದಲ್ಲ. ವಿದ್ಯಾಶಾಖೆಯು ಹೆಚ್ಚಿದುವು, ವಿದ್ಯಾ ಬೋಧಕರೂ ಹೆಚ್ಚಿದರು; ಆದರೆ, ಅವರೊಡನೆಯೇ ನಮ್ಮನಮ್ಮಲ್ಲಿ ಅವಿಚಾರವಾದ ಭಯಂಕರ ರೋಗವು ಎಲ್ಲೆಡೆಯಲ್ಲಿಯೂ ಪ್ರಸರಿಸುತ್ತಿರುವುದು. ಅವೂ ಅಲ್ಲದೆ ವಿದ್ಯಾವಂತರು ತಮ್ಮಲ್ಲಿರುವ ಸದ್ಗುಣವನ್ನು ಪ್ರಕಾಶಪಡಿಸುವವರೂ, ದೋಷಗಳನ್ನು ತಿದ್ದಿ ವೆಂ ಸುವವರೂ ಅತಿ ವಿರಳರು. ಆದಲ್ಲೋಸುಗ ಈ ವಿಶ್ವಾತ್ಮಾಧಾರಕನಾದ ವಿಶ್ವೈಕ್ಯ ಸಲಹೆಯಿಂದ ಲೋಕವೆಲ್ಲೆಲ್ಲಾ ಪ್ರಭುವರ್ಯರು ನಾನ್ಮೇಕತ್ವವನ್ನು ತಿಲಗಳಂತೆ ಮಾಡಿ ದೈವಭಕ್ತಿಯುಳ್ಳವರಾಗಿ ಮಾಡಿ, ತಮ್ಮ ಯೋಗಕ್ಷೇಮಾರೋಗ್ಯ ಐಶ್ವರ್ಯವಂತರಾಗಿಯೂ, ಸಾಮಾನಧರ್ಮಶಾಸ್ತ್ರರಾಗಿಯೂ, ಅಖಂಡಶಾಂತತ್ವವನ್ನು ಅಂತರಾಗಿಯೂ ಬಾಳಬಹುದು. ಈ ಮಹಾತ್ಮೆಯಿಂದ ಜನರಲ್ಲಿ ಪರಸ್ಪರ ಪ್ರೇಮ, ಪ್ರೀತಿ ವಿಶ್ವಾಸ, ಸಹಕಾರ

501 ಸ್ಪೆಷಲ್ ಸಾಬೂನು ಬಂದಿದೆ.

52—7

ಮೇಲ್ದರ್ಜೆಯ ಜೆನ್ನಾಗಿ ಒಗೆಯುವ ಸಾಬೂನು ಬೇಕೆಂದು ಗಿರಾಕಿಗಳು ಹೆಚ್ಚಾದ್ದರಿಂದ 501 ಸ್ಪೆಷಲ್ ಒಗೆಯುವ ಸಾಬೂನನ್ನು ತಯಾರಿಸಿದೆ. ಹೆಸರುವಾಸಿಯೂದ ಟಾಮ್‌ಕೋ 501 ಒಗೆಯುವ ಸಾಬೂನಿಂದ ಸ್ಪೆಷಲಾಗಿ ತಯಾರಿಸಿದೆ. ಇದು ಸ್ವಚ್ಛವಾಗಿಯೂ, ಮೃದುವಾಗಿಯೂ ಇದೆ. ಬಹಳ ನಾಜೂಕಾದ ಬಟ್ಟೆಗಳನ್ನು ಜೊಕ್ಕಟವಾಗಿ ಒಗೆಯಬಹುದು.

TOMCO

ಇತರ ವಿಷಯಗಳಿಗೆ ಬರೆಯಿರಿ—
ಟಾಮ್‌ಕೋ ಮೂರಾಟದ ಮಳಿಗೆ,
೧, ಸೆಂಟ್ರಲ್ ಸ್ಟ್ರೀಟ್,
ಬೆಂಗಳೂರು ದಂಡು.

ತಯಾರಿಸುವವರು:—
ತಾತಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ ಮತ್ತು ತಾತಾಪುರಂ.
ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಪ್ರಸಿದ್ಧ ಔಷಧಗಳು.

ನವರತ್ನ
ಅಶೋಕಾರಿಷ್ಟ.

ಸ್ತ್ರೀಯರು ಕ್ರಮವಾಗಿ ಮುಟ್ಟಾಗದಿರುವಿಕೆ ಮುಟ್ಟಾಗುವಾಗ ಬರುವ ಹೊಟ್ಟೆನೋವು, ಸೊಂಟನೋವು, ನಿತ್ರಾಣ, ಬೆನ್ನುಮೂಳೆನೋವು, ಅಧಿಕಶ್ರಾವ, ಸೋಮ ರೋಗ ವಗೈರೆ ಪರಿಹರಿಸಿ ಸ್ತ್ರೀಯರ ಆರೋಗ್ಯವನ್ನು ಕಾಪಾಡುವ ಗರ್ಭ ರಕ್ಷಿಣಿಯು,

ದೊಡ್ಡ ಕುಪ್ಪಿ 2—8—0, ಅರ್ಧ ಕುಪ್ಪಿ 1—6—0.

ನವರತ್ನ
ದ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ, ಅರುಚಿ ನಿತ್ರಾಣ ವಗೈರೆ ಪರಿಹರಿಸಿ, ಜೀರ್ಣಶಕ್ತಿಯನ್ನೂ, ನರಗಳಿಗೆ ಶಕ್ತಿಯನ್ನೂ, ಮುಖದಲ್ಲಿ ಕಾಂತಿಯನ್ನೂ, ಮನಸ್ಸಿಗೆ ಉಲ್ಲಾಸವನ್ನೂ ಕೊಡುವ ಪ್ರಸಿದ್ಧವಾದ ಔಷಧವು.

ದೊಡ್ಡ ಕುಪ್ಪಿ 1—8—0, ಅರ್ಧ ಕುಪ್ಪಿ 0—13—0

ಸ್ವರ್ಣಮಿಶ್ರಿತ
ನವರತ್ನಾವೃತ.

ನಿರ್ಬಲವಾದ ನಿಮ್ಮ ಶರೀರವನ್ನು ರಕ್ಷವೃದ್ಧಿಯಿಂದ ದೇಹಪುಷ್ಟಿಯನ್ನೂ, ವೀರ್ಯವೃದ್ಧಿಯನ್ನೂ, ಖಾಡಪುಷ್ಟಿಯನ್ನುಂಟುಮಾಡಿ, ನಿಮ್ಮನ್ನು ದೃಢಕಾಯರನ್ನಾಗಿಯೂ, ಆರೋಗ್ಯವಂತರನ್ನಾಗಿಯೂ ಮಾಡುವ ಭಂಗಾರ ಮಿಶ್ರಿತ ಅಮೋಘವಾದ ಟಾನಿಕ್ಕು.

ದೊಡ್ಡ ಕುಪ್ಪಿ 3—8—0 ಅರ್ಧ ಕುಪ್ಪಿ 1—14—0.

ನವರತ್ನ
ಚ್ಯವನಪ್ರಾಶ.

ಉಬ್ಬಸ, ಖಾಸ, ಕೆಮ್ಮು, ದಮ್ಮು, ಕ್ಷಯ, ಕಫದಲ್ಲಿ ರಕ್ತಬೀಳುವಿಕೆ, ಎದೆನೋವು, ಹುಳಿತೇಗು ವಗೈರೆ ಪರಿಹರಿಸಿ ಎಲೆಗೆ ಶಕ್ತಿಯನ್ನು ಕೊಡುವ ಆಯುರ್ವೇದದಲ್ಲಿನ ಪ್ರಸಿದ್ಧವಾದ ಲೇಹ್ಯವು

½ lb 1—8—0, ¼ lb 0—13—0.

ಹೆಚ್ಚಿನ ಮಾಹಿತಿಗೆ ಬರೆದುಕೊಳ್ಳಿರಿ—

ಏಜೆಂಟರು—ಎ. ಎಸ್. ಮಾಚಯ್ಯ, ಜವುಳಿಅಂಗಡಿ, ಸುಂಟಿಕೊಪ್ಪ } ಸ್ಟೋರಿಸ್ಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.

52—7 ನವರತ್ನ ಫಾರ್ಮಸಿ,

ಮಲೇರಿಯಾನ

ಮಲೇರಿಯಾನವು—ಮಲೆ ಜ್ವರ, ಥಳ ಜ್ವರ 2, 3 ದಿನ ಸಕ್ಕೊಮ್ಮೆ ಬರುವ ಜ್ವರ ಇಂಜೆಕ್ಷನ್‌ಗಿಂದಲೂ ಯಾ ಬೇರೆ ಔಷಧದಿಂದಲೂ ಬಿಡದಿರುವ ಜ್ವರಗಳನ್ನು ಗುಣಪಡಿಸುತ್ತದೆ. ಜ್ವರಗಡ್ಡೆ ಸಹ ಕರಗಿಸುತ್ತದೆ. ಸೀಸೆಗೆ ರೂ. 1/8 ಮತ್ತು ಆಣೆ 14.

ರಿಂಗ್ ವರ್ಮ್ ಬಾವು—ಗಜಕರ್ಜ ಹುಳಕಡ್ಡಿ, ಹುಳ ಮೇಯುವುದು, ಇತ್ಯಾದಿಗಳಿಗೆ ಸಿದ್ಧೌಷಧ. ಡಬ್ಬಿಗೆ ಆಣೆ 5.

ಸಿರಪ್ ಬ್ಲಟಿ—ಉಬ್ಬಸ, ವೇವಸ, ಕೆಮ್ಮು, ಕಫ, ದಮ್ಮು ರೋಗಕ್ಕೆ ಪಾತ್ರ. ಸೀಸೆಗೆ ರೂ. 3—8—0 ಮತ್ತು 1—14—0.

ಈಯರ ಆಯಿಲ್—ಕಿವಿ ಕೇಳಿಸೋರುವುದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥೆಗಳನ್ನು ಗುಣಪಡಿಸುತ್ತದೆ ½ ಟಿನ್ನಿಗೆ ಆಣೆ 8.

ಬಾಲಗ್ರಹ ಮೂತ್ರೆ—ಮಕ್ಕಳ ಚೇಷ್ಟೆ, ಕಫ, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಹೊಲೆಹಾಲು ತಿನ್ನದಿರುವಿಕೆ ಇತ್ಯಾದಿಗಳನ್ನೂ ಶೀಘ್ರವಾಗಿ ಗುಣಪಡಿಸುವುದು 100ಕ್ಕೆ ಆಣೆ 8 ಮತ್ತು 50ಕ್ಕೆ ಆಣೆ 4.

ಟೂತ ಡ್ರಾಪ್ಸ್—ಹಲ್ಲು ಕೊಳಕು ಕೂತು ಬಿದ್ದು ವಸಡು ಬೀಗಿ ತಡೆಯಲಾರದೆ ನೋವಿಗೆ ರಾಮಬಾಣ. ಸೀಸೆಗೆ ಆಣೆ 8.

ಜ್ಯಾಂಡಿಸ್ ಮಿಕ್ಸ್ಚರ್—ಪಿತ್ತ ಕಾಮಲೆ ತಡೆಯಿರುವುದು, ಅದಸಿನ ಮುಂತಾಗಿ ಬಾಯಿರುಚಿ, ರುಚಿ ತಪ್ಪುವದು ಅಜೀರ್ಣತೆ, ಮಲಬದ್ಧತೆ, ಎದೆಸುಡುವದು, ನಿದ್ರಾ ಭಂಗ, ಹಳದಿ ಮೂತ್ರ ಈ ಮೊದಲಾದ ಪಿತ್ತದ ಲಕ್ಷಣಗಳನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1—0—0.

ಸಿರಪು ಪೆಸಿಫೂಜ, ವೇದನಾ ಕುಠಾರಿ—ಪ್ರಮೇಹ, ಮೂತ್ರಕೃಚ್ಛ, ಮೂತ್ರಹೋಗದಿರುವಿಕೆ, ಮೂತ್ರಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಇವೇ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ. ರೂ. 3—8—0 ಮತ್ತು 1—14—0.

ಪಾರ್ಮ್ ಎಕ್ಸ್‌ಪೆಲರ್ ಬಿಲ್ಲೆಗಳು—ಸಕಲ ತರದ ಹೊಟ್ಟೆ ಹುಳಗಳನ್ನು ನಾಶಪಡಿಸಿ ಜಾಡಿಸುವುದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5. 100ಕ್ಕೆ ರೂ. 2.

ಟೂತ್ ಪೌಡರ್—ದಂತ ಚೂರ್ಣ. ಡಬ್ಬಿಗೆ ಆಣೆ 5.

ಶುದ್ಧ ಔಷಧಿ ಮದ್ದುಗಳೂ, ಹೊಮ್ಮೊಪಥಿ ಔಷಧಗಳೂ ವಿವಿಧ ರೋಗಗಳಿಗಾಗುವ ಇತರ ಮದ್ದುಗಳೂ ನಮ್ಮಲ್ಲಿ ದೊರಕುತ್ತವೆ.

ಕೆಟಲಾಗು ಧರ್ಮಾರ್ಥ. ಬರೆಯಿರಿ:—

The Malariana Co.; No. 14, Mangalore.

ಮಲೇರಿಯಾನ ಕಂಪೆನಿ, ಪಂಪವನಕಟ್ಟೆ, ನಂಬ್ರ 14, ಮಂಗಳೂರು, ದ. ಕ.

52—50

ಪೈಸರಿಯರ ಕ್ಷೇಮಾಭಿವೃದ್ಧಿ ಸಂಘದ ಹಣ ಸಹಾಯ ಮಾಡಿದ ಮಹನೀಯರು.

(ಕೊಡಗು ಕಮಿಷನರವರ ಆಫೀಸಿನಿಂದ)

ತಾ. 12—6—35ರಲ್ಲು ಮೈ. ಗಳಾದ ಬಿ. ಕೆ. ಪುಟ್ಟಯ್ಯ, ಯಂ. ಯೆಸ್. ಅನಂತಪದ್ಮನಾಭರಾವ್ ಮತ್ತು ಜಿ. ಶ್ರೀನಿವಾಸ ಮೂರ್ತಿಯವರು (ಹುಂಕಥಿ ಮೂಲಕ) ರೂ. 15

ತಾ. 14—6—35ರಲ್ಲು ಮೈ ಗಳಾದ ಯನ್. ಮುದ್ದಪ್ಪನವರು ರೂ. 10, ಪಿ. ಸಿ. ನಂಜಪ್ಪ 1—8—0, ಎ ಕೆ ಪ್ಪಯ್ಯ 1—4—0, ಯೆರ. ಯಂ. ಮೇದಪ್ಪ 1—4—0, ಜೆ. ಪಿ ಕಾರ್ಯಪ್ಪ 1—4—0, ಯಂ. ಯಸ್. ಚಿಟ್ಟಿಚ್ಚ 1—4—0, ಕೆ ಬಿ. ತಿಮ್ಮಯ್ಯ 1—4—0, ಯಂ. ಭೀಮಯ್ಯ 1, ಕೆ ಗಣಪತಿ 1, ಯಂ. ಸಿ. ಜಂಗಪ್ಪ. 1, ಎ ಸಿ. ಬ್ಬಪ್ಪ 1, 8 ಲಣ್ಣ ಸಕಾರ 15 ಮಹನೀಯರಿಂದ 7—8—0.

ತಾ. 15—6—35ರಲು ಮಣಿಕೇರಿ ಹುಡುಗಿಯರ್ಸ್ ಶಾಲೆಯ ವಿದ್ಯಾರ್ಥಿನಿಯರು ಸ್ವಾಫ್ ಮತ್ತು ಹೆಡ್ ಮಿಸ್ಟ್ರೆಸ್ ರೂ. 60, ಮೆ. ಜಿ. ಯಸ್. ಬೋಸ್‌ಮೆನ್, (ಕೊಡಗು ಕವಿಶನರ್) ರೂ. 25.

ತಾ. 18—6—35ರಲ್ಲು ಮೈ. ಗಳಾದ ಬಿ. ಎ. ಬೆಳ್ಯಪ್ಪ ರೂ. 2, ಐ ಸಿ ಸುಬ್ಬಯ್ಯ 10, ರಾ. ಬಿ. ಪಿ. ದೇವಯ್ಯ 5, ಮೆ. ಎ. ಇ. ಜೆ. ನಿಕ್ಕಲ್ಸ್ ಮತ್ತು ಅವರ ಪತ್ನಿ 50, ಮೆ. ಟಿ. ಆರ್. ತಿರುವೆಂಗಡಂ ಪಿಳ್ಳೆ 10, ರಾ. ಸಾ. ಸಿ. ಬಿ, ಐಯ್ಯಣ್ಣ 2, ಮೈ. ಗಳಾದ ಸಿ. ಯಂ. ರಾವ್-ರಾವ್ 5, ಕೆ. ಯಂ. ಬೆಳ್ಯಪ್ಪ 1, ಸಿ ಯಂ. ಭೀಮಯ್ಯ 3, ಸಿ. ಯಸ್. ಕೃಷ್ಣರಾವ್ 1, ಸಿ. ಯಂ. ಪೊನ್ನಪ್ಪ 5, ಯಸ್. ಸೀತರಾಮಯ್ಯ1, ಕೆ. ಬಿ. ಪೊನ್ನಪ್ಪ 1, ಸಿ. ಯನ್. ವೆಂಕಪ್ಪಯ್ಯ 5, ಯಂ. ಭೀಮಯ್ಯ 1, ಪಿ. ಎ. ನಂಜಪ್ಪ 5, ಯಂ. ಎನ್. ಅಪ್ಪಣ್ಣ 5, ಪಿ. ಬಿ. ಪೂಣಚ್ಚ 3, ಕೆ. ಸಿ. ಸುಬ್ಬಯ್ಯ 2, ಯಂ. ಯಸ್. ಮಂದಣ್ಣ 15 ಯನ್. ರಾಮಯ್ಯ 1, ಜಿ. ಎ ಶ್ರೀನಿವಾಸಲು ನಾಯುಡು 5, ಬಿನ್. ಸಿ. ಸುಬ್ಬಯ್ಯ 5, ಪಿ. ಆರ್. ಟಿ ಪೂಜ 5, ಕೆ. ಟಿ. ಉತ್ತಪ್ಪ 5, ಯಂ. ಯಂ. ಐಯ್ಯಪ್ಪ 1, ಸಿ. ಬಿ. ಸೋಮಣ್ಣ 3, ಪಿ. ಜಿ. ಐಯ್ಯಪ್ಪ 3, ಯನ್. ಸೋಮಣ್ಣ 2, ಐ. ಕೆ. ಪೂಜಯ್ಯ 1, ಪಿ. ಎ. ಮಂದಪ್ಪ 1, ಹೆಚ್. ಡಿ. ಚೆನ್ನಮಲ್ಲಪ್ಪ 2, ಹೆಚ್. ಬಿ. ಹೊನ್ನಪ್ಪ 1, ಪಿ. ಕೆ. ಕುಶಾಲಪ್ಪ 2, ಸಿ. ಹೆಚ್. ಕಾಳಪ್ಪ 1½ ಬಿ. ಗಣಪತಿ 1, ಪಿ. ಪಿ. ಜೋಗಪ್ಪ 1, ಕೆ. ಪೂದಪ್ಪ 2, ಕೆ. ಪಿ, ಮುದ್ದಯ್ಯ 1, ಬಿ. ಯಸ್. ಕುಶಾಲಪ್ಪ 8. ಜುಮ್ಲೆ 312—4—0.

ವೀರಾಜಪೇಟೆ ಮುನ್ಸಿಫರಿಂದ ತೆಗೆಸಿಕೊಂಡ ಹಣವು ಮದ್ರಾಸ ಕಮಿಷನ್ 0—1—0. 18—6—35ರಲ್ಲು ಕವಿಶನರ ಆಫೀಸಿನಲ್ಲಿ ಜುಮ್ಲೆ ಸಿಕ್ಕಿದ ಹಣ 312—0—0.

ಬಂಗಾಳೀ ಬಂದಿಗಳ ದಿಗ್ವಿಜಯ.

ಕ್ರಾಂತಿಕಾರರೆಂದು ಈ ಕಾರಾಗೃಹದಲ್ಲಿ ಕಾಲ ಕ್ಷೇಪವಿಲ್ಲದೆ ಕೊಳೆಯುತ್ತಿರುವರಷ್ಟೆ. ಬಂಗಾಳಿ ಯುವಕರು. ಅವರಲ್ಲಿ ಕೆಲವರನ್ನು ಪರೀಕ್ಷಾರ್ಥವಾಗಿ ಬಿಡುಗಡೆ ಮಾಡಿದರು. ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಅವರಿಗೆ ಅವಕಾಶವನ್ನೂ ಕೊಟ್ಟರು.

ಪರೀಕ್ಷೆಯ ಫಲಿತಾಂಶಗಳು ಕ್ರಾಂತಿಕಾರರ ಬುದ್ಧಿಶಕ್ತಿಯನ್ನು ಸಾರುತ್ತಿದೆ. ಅವರಲ್ಲಿ ಅತ್ಯಧಿಕ ಮಂದಿ ತೇರ್ಗಡೆಯನ್ನು ಹೊಂದಿದ್ದಾರೆ. ಪ್ರಶಸ್ತಿಪಡೆದು ದಡಮುಟ್ಟಿದ್ದಾರೆ. ಇದರ ಮೇಲೆ ಟೀಕೆಮಾಡುತ್ತಾ ಕಲ್‌ಕತ್ತೆಯ 'ಅಡ್ವಾನ್ಸ್' ಪತ್ರಿಕೆಯು ಕ್ರಾಂತಿಕಾರರೆಂದು ಜೆಗಳಿನುಡಿಯುತ್ತಿದ್ದವರಿಗೆ ಮೆಲುಕು ಹಾಕಲು ಸ್ವಲ್ಪ ಗ್ರಾಸವನ್ನು ಎತ್ತಿ ಹಿಡಿದಿದೆ.

'ಕಂಡಿರೋ ಕ್ರಾಂತಿಕಾರರ ಖೊಳರ ಬುದ್ಧಿ ಶಕ್ತಿಯನ್ನು! ಕೇವಲ 'ಸಂಶಯ ವ್ಯಕ್ತಿ'ಗಳೆಂಬ ನೆಪದ ಮೇಲೆ ಈ ಬುದ್ಧಿವಂತಿಗಳನ್ನು ಅನ್ಯಾಯವಾಗಿ ಕೊಳೆಸುತ್ತಿದ್ದರಲ್ಲಾ! ಒಂಗಾಳದ ಗವರ್ನರರೂ, ಕಲ್‌ಕತ್ತೆ ವಿಶ್ವವಿದ್ಯಾನಿಲಯದ ಕುಲಪತಿಗಳೂ ಆಗಿರುವ ಸರ್ ಜಾನ್ ಅಂಡರ್‌ಸನ್‌ರವನ್ನು ಈ ಆಧಾರಗಳ ಮೇಲೆ ವಿಚಾರಿಸುತ್ತೇವೆ ಆಂಗ್ಲೊ—ಇಂಡಿಯನ್ ಪತ್ರಿಕೆಯೊಂದು ಸಹಾ ಸೌಜನ್ಯದಿಂದ ಕರೆದಂತೆ ಈ 'ಅಮೂಲ್ಯ' ಅನರ್ಘವನ್ನು ತಪ್ಪಿಸಿಕೊಂಡು, ಬಂಗಾಳಕ್ಕೆ ಇದೆಂದು ನುನೋರೋಗವಾಗಿ ಪರಿಣಮಿಸಿದೆ.'

ಪ್ರಕಟಣೆ.

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಪಂಸಿನ ಕಡವು ಮದಪ್ಪುರ ದೇವಸ್ಥಾನದ ಪರವಾಗಿ ಭಕ್ತ ಮಹಾಜನಗಳಿಂದ ಹರಕೆ ಮತ್ತು ಕಾಣಿಕೆ ವೊದಲಾದವುಗಳನ್ನು ಸ್ವೀಕರಿಸುತ್ತಿರುವರಾಗಿ ತಿಳಿಯಬಂದಿದೆ. ಆದ್ದರಿಂದ ಮಲಯಾಳದಲ್ಲಿರುವ ಪಂಸಿನಕಡವು ಮದಪ್ಪುರ ದೇವಸ್ಥಾನದ ಯಾವ ಕಾಣಿಕೆ ಯಾ ಹರಕೆಗಳನ್ನು ಈ ದೇವಸ್ಥಾನಗಳಲ್ಲಿ ಕೊಡಬಾರದಾಗಿ ಕೊಡಗಿನ ಭಕ್ತಾದಿಗಳಲ್ಲಿ ವಿನಂತಿ. ಪಂಸಿನಕಡವು ದೇವಸ್ಥಾನದಿಂದ ಈ ಕಾಣಿಕೆಗಳನ್ನು ಸ್ವೀಕರಿಸಲು ಕೊಡಗಿನಲ್ಲಿ ಯಾರನ್ನೂ ನೇಮಿಸಿರುವದಿಲ್ಲ. ಆದಪ್ಪಯ್ಯನಿಕ್ಕ ಮೇಲ್ಕಂಡ ದೇವಸ್ಥಾನಕ್ಕೆ ಇರುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಈ ಕೆಳಗಿನ ವಿಳಾಸದವರಿಗೇನೇ ಕಳುಹಿಸಬೇಕಲ್ಲದೆ ಈ ವಿಚಾರವನ್ನು ಸಕಲ ಭಕ್ತಾದಿ ಜನಗಳಲ್ಲಿ ಪ್ರಚಾರ ಮಾಡಬೇಕೆಂದು ಅತಿ ವಿನಯದಿಂದ ಕೋರಿಕೆ.

ಪಿ. ಯಂ. ಕ. ಂಞಿರಾಮನ್
ಪಂಸಿನಕಡವು. [26—3] ಮೇನೇಜರ್,
25—5—'35. ಪಂಸಿನಕಡವು ಮದಪ್ಪುರ ದೇವಸ್ಥಾನ.

ವರ್ತಮಾನ ಸಂಗ್ರಹ.

ಒಳದೇಶ.

ಈ ತಾ. 10 ರಿಂದ 21ರ ವರೆಗೆ ಮಡಿಕೇರಿಯಲ್ಲಿ 8.81 ಇಂಚು ಮಳೆಯಾಗಿದೆ. ತಾ. 18 ರಲ್ಲಿ 2.21 ಇಂಚು ಮಳೆಬಿತ್ತು.

ಮಡಿಕೇರಿ ಮುನ್ಸಿಪಲ್ ಕಮಿಟಿಯವರು ವೈಸರಾಯರ ಕ್ವೆಟ್ಟಾ ಭೂಕಂಪ ರಿಲೀಫ್ ಫಂಡಿಗೆ ರೂ. 100 ಕೊಡಲು ತೀರ್ಮಾನಿರುವರು.

ಕೊಡಗು ಕಮಿಷನರವರು ಸರ್ಕಾರಿ ಕೆಲಸದ ಮೇಲೆ ಈ ತಾ. 21 ರಲ್ಲಿ ಬೆಂಗಳೂರಿಗೆ ಹೋಗಿ ಒಂದು ವಾರದೊಳಗೆ ವಾಪಸು ಬರುವರೆಂದು ವರ್ತಮಾನ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರಕ್ಟರುಗಳ ಎಂಟಿಂಗು ಈ ತಾ 29 ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಲಿಕ್ಕಿದೆ.

ಬೇಸಿಗೆ ಕಾಲದ ರಜೆ ತೀರಿ ಹಿಂದೀ ಪ್ರವೇಟ್ ಕ್ಲಾಸುಗಳು ಸೆಂಟ್ರಲ್ ಹೈಸ್ಕೂಲು ಕಟ್ಟಡದಲ್ಲಿ ಪುನಹ ಪ್ರಾರಂಭವಾಗಿವೆ ಈಗ ಕ್ಲಾಸುವಾರು ಎಂಗಡಿಸಿ ಪಾಠ ಹೇಳುವ ಏರ್ಪಾಡು ಮಾಡಲಾಗಿದೆ

ರೈಲ್ವೆ ಇಲಾಖೆಯವರಿಂದ ತರಬೇತಿಗಾಗಿ ಇಂಗ್ಲೆಂಡಿಗೆ ಕಳುಹಿಸಲ್ಪಟ್ಟಿರುವ ಮಾ ರಾ. ಕೇಳಪಂಡ ಯಂ. ಐಯ್ಯಣ್ಣನವರು ಮೆಕಾನಿಕಲ್ ಇಂಜಿನೀಯರಿಂಗ್ ಪರೀಕ್ಷೆಯ ಎರಡು ಬಿ ಗ್ರೂಪ್‌ಗಳಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯಬರುತ್ತದೆ.

ವೀರಾಜಪೇಟೆನಾಡು ನಾಲ್ತೇರಿ ಗ್ರಾಮದ ತೋರೇರ ಉತ್ತಯ್ಯನವರ ಬಳಿ 15 ದಿವಸಗಳಿಂದ ಯೂರೋಪ್ ಪರಾರಿಯಾಗಿ ಬಂದ ಒಂದು ಬೀಜದ ಬಳೇ ಕೋಣನುರಿಯು ಸೇರಿಕೊಂಡಿರುತ್ತದಾಗಿಯೂ ಮೂಲೀಕರು ಕೋಣನುರಿಯನ್ನು ತೆಗೆದುಕೊಂಡು ಹೋಗಬಹುದಾಗಿಯೂ ತಿಳಿಸಿರುತ್ತಾರೆ.

ತಾ. 18 ರಲ್ಲಿ ಮಡಿಕೇರಿ ಕೌನ್ಸಿಲು ಹಾಲ್‌ನಲ್ಲಿ ಕಮಿಷನರವರು ನಡಿಸಿದ ಪಬ್ಲಿಕ್ ವಿಂಟಿಂಗಿನಲ್ಲಿ ವೈಸರಾಯರ ಕ್ವೆಟ್ಟಾ ರಿಲೀಫ್ ಫಂಡಿಗೆ ರೂ. 183 ಜಮೆಯಾಯಿತೆಂದು ತಿಳಿಯಬರುತ್ತದೆ. ಅದರ ವಿವರ ಇನ್ನೊಂದು ಕಡೆ ಕೊಡಲಾಗಿದೆ.

'ಕೊಡಗು' ಕಂಪೆನಿಯ ಡೈರೆಕ್ಟರುಗಳ ಎಂಟಿಂಗೊಂದು ತಾ. 29—6—'35ನೇ ಶನಿವಾರ ಸಾಯಂಕಾಲ 5 ಗಂಟೆಗೆ ಕಂಪೆನಿಯ ಆಫೀಸಿನಲ್ಲಿ ನಡೆಯುವುದು.

ಮಹ್ಮದ್ ಪೈಗಂಬರವರ ಜನ್ಮದಿನೋತ್ಸವವು ಈ ತಾ. 14 ರ ಸಾಯಂಕಾಲ 5 ಗಂಟೆಗೆ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ, ಬಟ್ಟಳಿದಿಂದ ಬಂದಿದ್ದ ಮೌ. ಜೆ ಹೆಚ್. ಶಾಮ್ಸುದಿನ್ ಬಿ ಎ. ಎಲ್ ಎಲ್. ಬಿ. ಯವರ ಅಧ್ಯಕ್ಷತೆಯಲ್ಲಿ ನಡಿಸಲ್ಪಟ್ಟಿತ್ತೆಂದು ತಿಳಿಯುತ್ತೇವೆ

ತಾ 13ರಲ್ಲಿ ಕೋಪಟ್ಟಿ ಮಲೆಯಲ್ಲಿ ಕುಡಿಯರ ಭೀಮ ಎಂಬವನು ಕಾರಣಾಂತರದಿಂದ ತನ್ನ ಹೆಂಡತಿಗೂ ಮತ್ತು ಮಗುವಿಗೂ ಗುಂಡು ಹೊಡೆದ ಹಾಗೂ ಮಗುವು ಕೂಡಲೆ ಮೃತವಾಗಿದೆಯೂಗಿಯೂ ಹೆಂಡತಿಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವುದಾಗಿಯೂ ಭೀಮನನ್ನು ಗಿರಿ ಮಾಡಲ್ಪಟ್ಟಿರುವುದಾಗಿಯೂ ತಿಳಿಯುತ್ತೇವೆ.

ಕೊಡಗು ಆರ್ಥಿಕ ವಿಚಾರಣಾ ಕಮಿಟಿಯವರು ಬರುವ ಜುಲೈ ತಾ. 1 ರಲ್ಲಿ ವೊನ್ನಂಪೇಟೆಯಲ್ಲಿಯೂ, ತಾ 2 ರಲ್ಲಿ ವೀರಾಜಪೇಟೆಯಲ್ಲಿಯೂ, ತಾ. 4ರಲ್ಲಿ ಶನಿವಾರಸಂತೆಯಲ್ಲಿಯೂ, ತಾ. 5ರಲ್ಲಿ ಸೋಮವಾರಪೇಟೆಯಲ್ಲಿಯೂ ಮತ್ತು ತಾ. 6ರಲ್ಲಿ ಮಡಿಕೇರಿಯಲ್ಲಿಯೂ ಕೆಲವು ಮಹನೀಯರನ್ನು ವಿಚಾರಿಸಿ, ಅಭಿಪ್ರಾಯ ತೆಗೆದುಕೊಳ್ಳುವರೆಂದು ವರ್ತಮಾನವಿದೆ.

ವಸಿಷ್ಠಾಶ್ರಮದ ಸ್ಥಾಪಕರೂ, ಧನ್ವಂತರಿ ವೈದ್ಯ ಶಾಲಾ ಮಲೀಕರೂ ಆದ (ಕೊಡಗಿನಲ್ಲಿ ಹಲವರಿಗೆ ಪರಿಚಿತಸ್ಥರಾದ) ಶ್ರೀಯುತ ಪಾಣಾಜೆ ವೈದ್ಯ ಶಂಕರನಾರಾಯಣ ಭಟ್ಟರು ಈ ತಾ 6ರಲ್ಲಿ ಉಕ್ಕಿನಡ್ಕದಲ್ಲಿ ಇಳಿಯುವಾಗ್ಯೆ ಆಕಸ್ಮಿತಾಗಿ ಬಸ್ಸಿನ ಅಡಿಗೆ ಬಿದ್ದು ಎಡದ ಕೈ ಮೇಲೆ ಚಕ್ರ ಹೋಗಿ, ಜಖಂ ಆಗಿ, ಕಾಸರಗೋಡು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವರಾಗಿ ವರ್ತಮಾನವಿದೆ

ಹಿಂದೂದೇಶ.

ತಾ. 18ರಲ್ಲಿ ಉತ್ತರ ಬೊಂಬಾಯಿಯು ಮೂಟುಂಗ ಎಂಬಲ್ಲಿ 24 ಗಂಟೆಗಳಲ್ಲಿ 9-4 ಇಂಚು ಮಳೆ ಬಿದ್ದು ಮೈವಾಟುಗಳೆಲ್ಲಾ ಸ್ವಲ್ಪ ಕಾಲ ನಿಂತು ಹೋಗಿತ್ತು.

ಸಲೋನಿನಲ್ಲಿ 5 ಮಿಲ್ಯ ಜನರನ್ನು ಪೀಡಿಸಿದ ಮಲೆಜ್ವರವು ಈಗ ಶಾಂತವಾಗುತ್ತಲಿದೆ. ಈತನಕ ಸರಕಾರದವರು 6,36,200 ರೂಪಾಯಿಗಳನ್ನು ಸಹಾಯ ಧನವಾಗಿ ಹಂಚಿರುವರು.

ರಾಷ್ಟ್ರಸಭಾಧ್ಯಕ್ಷರಾದ ಶ್ರೀ ಬಾಜೂ ರಾಜೇಂದ್ರ ಪ್ರಸಾದರು ಕ್ವೆಟ್ಟಾ ಭೂಕಂಪದಲ್ಲಿ ನಿರಾಶ್ರಿತರಾದವರ ಬಗ್ಗೆ ಸಹಾಯದ ಏರ್ಪಾಡು ಮಾಡಲು ಕರಾಚಿಗೆ ತೆರಳಿರುವರು. ಬೊಂಬಾಯಿ ಪ್ರಾಂತ್ಯದ ಸಂಚಾರ ಕಾರ್ಯಕ್ರಮವು ರದ್ದು ಮಾಡಲ್ಪಟ್ಟಿದೆ.

ಕ್ವೆಟ್ಟಾದಲ್ಲಿ ಜೂನ್ ತಾ. 1ರಲ್ಲಿ ಬೆಳಗಿನ ಝಾವ 5 -30 ಕ್ಕೆ ಸ್ವಲ್ಪ ಹೊತ್ತು ಭೂಮಿಯು ನಡುಗಿತು. ಆದರೆ ಯಾರಿಗೂ ಯಾವ ವಿಧವಾದ ಅಪಾಯುವಾಗಿಲ್ಲ. ಪ್ರತಿದಿವಸ ಬೆಳಗಿನ ಝಾವ 2 ಗಂಟೆಯಿಂದ 5 ಗಂಟೆ ಒಳಗೆ ಹೀಗಾಗುತ್ತಿರುವುದಂತೆ

ಕ್ವೆಟ್ಟಾನಗರದ ಭೂಕಂಪದಲ್ಲಿ ಆಸ್ಪತ್ರೆಗಳನ್ನೂ ಬಾಧುಬಳಗಗಳನ್ನೂ ಕಳೆದುಕೊಂಡು ಬೆಟ್ಟುತಿಂದು ಕರಾಚಿಯ ಇಂಡಿಯನ್ ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವ ಅನೇಕ ಮಂದಿ ಹೆಂಗಸರಿಗೆ ಬುದ್ಧಿಭ್ರಮಣೆಯಾಗಿ ಹುಚ್ಚು ಹಿಡಿದಿದೆಯೆಂದು ತಿಳಿದುಬಂದಿದೆ.

ಶ್ರೀ ಸುಬಾಸಚಂದ್ರಬೋಸರು ಕ್ರಮಶಃ ಗುಣಹೊಂದುತ್ತಿರುವರು, ಆಪರೇಶನ್ ಮಾಡಿದ ಹೊಟ್ಟೆಯ ಭಾಗಕ್ಕೆ ಬೆಲ್ಟ್ ಕಟ್ಟಿಕೊಂಡು ಸ್ವಲ್ಪ ಸ್ವಲ್ಪ ತಿರುಗುವರು ಕಾಸ್ಟಾದ್ ಎಂಬಲ್ಲಿ ಹೋಗಿ ಚಿಕಿತ್ಸೆ ನಡಿಸಬೇಕೆಂದು ಸೂಚಿಸಲ್ಪಟ್ಟಿರುವದರಿಂದ ಅವರು ಅಲ್ಲಿಗೆ ಬೇಗನೇ ಹೋಗಬಹುದು.

ಕೆಲವು ತಿಂಗಳುಗಳ ಕೆಳಗೆ ಕೊಚ್ಚಿನ್ ಸಂಸ್ಥಾನದ ದಿವಾನ್ ಪದವಿಯನ್ನು ಸ್ವೀಕರಿಸಿದ ಸರ್. ಆರ್. ಕೆ ಷಣ್ಮುಗಂ ಚೆಟ್ಟಿಯವರು ತಮ್ಮ ದಿವಾನ್ ಪದವಿಗೆ ರಾಜೀನಾಮೆ ಕೊಟ್ಟು ಹಿಂದೂಸ್ಥಾನದ ರಿಸರ್ವ್ ಬ್ಯಾಂಕಿನ ಡೆಪ್ಯೆ ಗವರ್ನರ ಪದವಿಯನ್ನು ಸ್ವೀಕರಿಸುತ್ತಾರೆಂದು ಹೇಳಲಾಗಿದೆ

ಕ್ವೆಟ್ಟಾ ಭೂಕಂಪ ನಿಧಿಗೆ ಮುನಿಸಿಪಾಲಿಟಿಗಳೂ ಮತ್ತು ಸ್ಥಾನ ಶಕ್ತಿ ಧನ ಸಹಾಯ ಮಾಡುತ್ತಿವೆ. ಸಾಮಾನ್ಯವಾಗಿ ಪ್ರತಿಯೊಂದು ಮುನಿಸಿಪಾಲಿಟಿಯು 250 ರಂತೆ ಮಂಜೂರು ಮಾಡಿದೆ. ಬೆಂಗಳೂರು ಮತ್ತು ಮಧುರಾ ಮುನಿಸಿಪಾಲಿಟಿಗಳು ಸಾವಿರದಂತೆ ಕೊಟ್ಟಿವೆ.

ಕ್ವೆಟ್ಟಾ ಭೂಕಂಪವಾದ ದಿನ ಡುಮುಕಾ ಎಂಬಲ್ಲಿ ವಿಚಿತ್ರವಾದ ಸುಪ್ರಕಾಶದ ನಕ್ಷತ್ರವೊಂದು ಆಕಾಶದಲ್ಲಿ ಮೂಡಿತೆಂದೂ, ನಾಗರಿಂತಾರಿ ಎಂಬಲ್ಲಿ ಈ ನಕ್ಷತ್ರದ ಬೆಳಕು ಚೆನ್ನಾಗಿ ಬಿದ್ದಿತೆಂದೂ ತಿಳಿದುಬರುತ್ತದೆ. ನಕ್ಷತ್ರವು, ಮೂಡಿದ ಅರೆಕ್ಷಣದಲ್ಲಿಯೇ ಪೂರ್ವ ದಿಕ್ಕಿನಲ್ಲಿ ಅದೃಶ್ಯವಾಗಿದೆ.

ಗುಂಟೂರು— ಬೆಜವಾಡಾ ಮೊದಲಾದ ಕಡೆಗಳಲ್ಲಿ ಉಷ್ಣವು ಕೊಂಚ ಶಾಂತವಾಗಿದೆ. ಆದರೆ, ಮನೆಗಳು ಉರಿಯುವ ಅನಾಹುತಗಳಿನ್ನೂ ತಪ್ಪಿಲ್ಲ. ಕಳೆದ ವಾರ ಕೊಳಕಲ್ಲೂರಿನಲ್ಲಿ ಎಪ್ಪತ್ತು ಮನೆಗಳು ಅಗ್ನಿಗಾಹುತಿಯಾದುವೆಂದು ವಾರ್ತೆ ಬಂದಿದೆ. ಎಲ್ಲೂರಿನಲ್ಲೂ ಅನೇಕ ಮನೆಗಳು ಸುಟ್ಟು ಹೋಗಿ ನೂರಾರು ಜನರು ನಿರಾಶ್ರಿತರಾಗಿರುವರು. ಮುನಿಸಿಪಾಲಿಟಿಯವರು 500 ರೂಪಾಯಿ ಸಹಾಯ ದ್ರವ್ಯವನ್ನು ಮಂಜೂರು ಮಾಡಿರುವರು.

ಈಜುವ ವಿದ್ಯೆಯಲ್ಲಿ ಪ್ರವೀಣಳಾದ ಬೆಂಗಳೂರಿನ ಮಿ. ಶ್ರೀನಿವಾಸರಾಯರಿಂದ ಶಿಕ್ಷಣ ಪಡೆಯುತ್ತಿದ್ದ ಕುಮಾರಿ ಬೈರಮ್ಮನು ಈ ತಾ. 23ನೇ ಭಾನುವಾರ ಬೆಳಿಗ್ಗೆ 6.30ರಿಂದ ಸಾಯಂಕಾಲ 6.30ರ ವರೆಗೆ ಹನ್ನೆರೆಡು ಘಂಟೆಗಳ ಕಾಲ ಎರಡು ಕೈಗಳನ್ನೂ ಕಟ್ಟಿಸಿಕೊಂಡು ರಾಮಧಾನಿಯ ಕುಕ್ಕರಹಳ್ಳಿ ಕೆರೆಯಲ್ಲಿ ಈಜುತ್ತಾಳೆಂದೂ, ಇಲ್ಲಿನ ಪುರಪ್ರಮುಖರೂ, ದೊಡ್ಡ ಮನುಷ್ಯರೂ ಒಂದು ಸಮಿತಿಯನ್ನೇರ್ಪಡಿಸಿ ಆ ಬಾಲಕಿಗೆ ಉಚಿತವಾದ ಮರ್ಯಾದೆ ಮಾಡಬೇಕೆಂದು ತೀರ್ಮಾನಿಸಿರುತ್ತಾರೆಂದೂ ತಿಳಿದುಬಂದಿದೆ.

ಕೊಚ್ಚಿನ್ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಮೆಂಬರಾದ ಮನಪತ್ ಕುಂಜು ಮಹಮ್ಮದ್ ಹಾಜಿ ಎಂಬಾತನು ಆ ಸಂಸ್ಥಾನದ ಮಹಾರಾಜರ ವಿಷಯದಲ್ಲಿ ಆಕ್ಷೇಪಣೆಗಳಿಂದ ಕೂಡಿದ ಸವಾಲುಚಾರಗಳನ್ನು ಬರೆದು ತನ್ನ ಏಜಂಟ್ ಮಹಮ್ಮದ್ ಎಂಬವನ ಮೂಲಕ ಊರಿನಲ್ಲೆಲ್ಲಾ ಹಂಚಿಸಿದನೆಂದು ವೊಕದ್ದಮೆಯಾಗಿ ವ್ಯಾಜಿಸ್ಟ್ರೇಟರು ಮಹಮ್ಮದ್ ಹಾಜಿಗೆ ಒಂದು ವರ್ಷ ಸಜಾ ಶಿಕ್ಷೆಯನ್ನೂ, 750 ರೂಪಾಯಿ ಜುಲ್ಮಾನೆಯನ್ನೂ, ಮಹಮ್ಮದನಿಗೆ ಒಂದು ವರ್ಷದ ಕಠಿಣ ಸಜಾ ಶಿಕ್ಷೆಯನ್ನೂ ವಿಧಿಸಿರುತ್ತಾರೆ.

ಈ ತಾ. 15ರಲ್ಲಿ ಬಂಗ್ಲಾಲದ ಗೋಲುಂಡದ ಪೊಲೀಸ್ ಕ್ಲಬ್ ಇನ್ಸ್‌ಪೆಕ್ಟರು ಸೈಯ್ಯದ್ ಅಸಾದ್ ಅಲಿಯವರು ಕ್ರಾಂತಿಕಾರರಿಂದ ಕೊಲ್ಲಲ್ಪಟ್ಟರು. 1934ನೇ ಮೇ ಯಲ್ಲಿ ಅಲ್ಲಿಯ ಗವರ್ನರರ ಮೇಲೆ ನಡೆಸಿದ ಆತ್ಯಾಚಾರದ ಮೇಲೆ ಕ್ರಾಂತಿಕಾರರಿಂದ ಇದೇ ಪ್ರಥಮ ಕೊಲೆ.

ತಲಜೇರಿಯಿಂದ 5 ಮೈಲು ದೂರದಲ್ಲಿರುವ ಮೋಕೇರಿ ಎಂಬ ಗ್ರಾಮದಲ್ಲಿ ಒಂದು ಹೊಳೆಯ ಪಕ್ಕದಲ್ಲಿ ಒಂದು ಫರ್ಲಾಂಗು ಉದ್ದ, ಸುಮಾರು 9 ಇಂಚು ಅಗಲ, ಕೆಲವು ಕಡೆ 15 ಅಡಿ ಆಳವಿರುವ ಭೂಮಿಯ ಒಡಕು ಹಕ್ಕನೆ ಕಂಡು ಬಂದಿದೆಯಂತೆ. ಇದನ್ನು ನೋಡಲು ಹಲವರು ಹೋಗುತ್ತಿರುವರು. ಕಲ್ಲಿಕೋಟೆ ತಾಲೂಕಿನ ಪೂರ್ವ ದಿಕ್ಕಿನ ಗ್ರಾಮಗಳಲ್ಲಿಯೂ ಇಂಥಾ ಒಡಕುಗಳುಂಟಾಗಿವೆಯೆಂದು ವರ್ತಮಾನವಿದೆ

ಕಳೆದ ತಿಂಗಳ 30ರಲ್ಲಿ ಒಲೂಚಿಸ್ಥಾನದಲ್ಲಿ ಭೂಕಂಪ ಉಂಟಾದ ಕಡೆಯಲ್ಲಿ ಭೂಮಿ ಒಡೆದದ್ದು ಈಗ ಕಂಡು ಬಂದಿದೆ. ಈ ಒಡಕು 75 ಮೈಲು ಉದ್ದವಾಗಿಯೂ, 8 ರಿಂದ 20 ಅಡಿಗಳ ವರೆಗೆ ಅಗಲವಾಗಿಯೂ ಇದೆ. ಈ ಒಡಕಿಗೆ ಉಪ ಒಡಕುಗಳೂ ಇವೆ. ಭೂಕಂಪಕ್ಕೆ ಮುಂಚಿತವಾಗಿ ಈ ಒಡಕಿರುವ ಕಡೆ ಪ್ರಕಾಶವಾದ ಬೆಳಕು ಕಾಣುಬಂದು, ಭಯಂಕರವಾದ ಶಬ್ದವುಂಟಾದಮೇಲೆ ಭೂಮಿಯು ನಡುಗಿತೆಂದೂ, ಮರುದಿನ ಬೆಳಿಗ್ಗೆ ಈ ಒಡಕು ಕಂಡು ಬಂತೆಂದೂ ಅಲ್ಲಿಯ ಗ್ರಾಮಸ್ಥರು ಹೇಳಿದೆ.

ಗಾಂಧಿಜಿಯವರು ಜೂನ್ 6ನೇ ತಾರೀಕು ವೈಸರಾಯರಿಗೆ ತಾವು ಕ್ವೆಟ್ಟಾಕ್ಕೆ ಹೋಗಲಿಕ್ಕೆ ಅನುಮತಿ ಕೊಡಬೇಕೆಂದು ಕೇಳಿದ್ದರೆಂತಲೂ ಹಾಗೆ-ತಮಗೆ ಅನುಮತಿ ದೊರೆತಲ್ಲಿ ಕೆಲಮಂದಿ ತಮ್ಮ ಅನುಯಾಯಿಗಳಿಗೆ ಸಹ ಹುಕ್ಕುಂ ಕೊಡಬೇಕೆಂದು ಕೇಳಿದ್ದರು. ಆದರೆ ವೈಸರಾಯರು ಈ ಮುಂಚೆ ಬಾಬು ರಾಜೇಂದ್ರ ಪ್ರಸಾದರು ಅವರ ಅನುಯಾಯಿಗಳಿಗೆ ಅನುಮತಿಕೊಡಲಿಕ್ಕೆ ಇಷ್ಟರಲ್ಲಿ ಇತರ ವ್ಯಕ್ತಿಗಳ್ಯಾರೂ ಹೋಗಕೂಡದೆಂತಲೂ, ಹಾಗೆ ಸಹಾಯ ಮಾಡಬೇಕೆಂದು ಅಪೇಕ್ಷೆಯುಳ್ಳವರು ಸಿಂಧ್, ಪಂಜಾಬದಲ್ಲಿರುವ ನಿರಾಶ್ರಿತ ಜನರಿಗೆ ಬೇಕಾದಷ್ಟು ಸಹಾಯ ಮಾಡಬಹುದೆಂದು ಪ್ರತ್ಯುತ್ತರ ಕೊಟ್ಟಿರುವರು.

ಶ್ರೀಮತಿ ಕಮಲಾ ನೆಹರೂ. ಕುಮಾರಿ ಇಂದಿರಾನೆಹರು ಮತ್ತು ಡಾಕ್ಟರ್ ಅಕಲದವರು ಇದೇ ತಾ. 4ರಲ್ಲು ವಿಯನ್ನಕ್ಕೆ ಮುಟ್ಟಿದ್ದಾಗ್ಯೆ. ವಿಯನ್ನದಲ್ಲಿದ್ದ ಹಿಂದಿಯರು ಅವರಿಗೆ ಸಂಭ್ರಮದ ಸ್ವಾಗತವಿತ್ತರು ಶ್ರೀಮತಿಯವರನ್ನು ಸ್ವಾಗತೀಕರಿಸುವದಕ್ಕಾಗಿಯೇ ಶ್ರೀ ಸುಬಾಸಚಂದ್ರಬೋಸರು ಅರೋಗ್ಯವಸತಿಯಿಂದ ಎದ್ದು ಬಂದಿದ್ದರು. ಶ್ರೀಮತಿಯವರನ್ನು ಡಾಕ್ಟರರು ಪರೀಕ್ಷಿಸುವ ತನಕ ಅವರು ಬ್ರಸ್ಸಲ್ಸ್ ಹೋಟಲ್ಲಿನಲ್ಲಿ ವಾಸಿಸಲಿರುವರು. ಸುಬಾಸಚಂದ್ರರಿಗೆ ಚಿಕಿತ್ಸೆ ಮಾಡಿದ ಡಾಕ್ಟರ್ ನ್ಯೂಮನರೇ ಕಮಲಾ ನೆಹರುಗಳನ್ನೂ ಪರೀಕ್ಷಿಸಿ ಅವರಿಗೆ ಆಪರೇಶನ್ ಮಾಡಬೇಕೋ, ಚಿಕಿತ್ಸೆ ನಡಿಸಬೇಕೋ ಎಂಬುದನ್ನು ನಿಶ್ಚೈಸಲಿರುವರು. ಆಪರೇಷನ್ ಮಾಡುವುದಾದರೆ ಶ್ರೀಮತಿಯವರು ಬರ್ಲಿನಿಗೂ, ಚಿಕಿತ್ಸೆ ನಡಿಸುವುದಾದರೆ ಸ್ವಿಜರ್ಲೆಂಡಿಗೂ ಹೋಗಲಿರುವರು

ಹಾಲು ಬೆಂಡೆ, ನೊರಸು ಬೇಡ; ನಾರಕ್ಕೆ ಬೇಕಂತೆ, ಕಲ್ಕತ್ತಾ ಬಳೆಯ ಬ್ಯಾಸಾಧುವಿಗೆ. ತನ್ನ ಶಿಷ್ಯನನ್ನೇ ಬಲಿ ಪಡೆವ ಅಲೋಚನೆ ಮಾಡಿದ. ಐದು ಸಾವಿರಾಣೆ ಕೊಟ್ಟು ಶಿಷ್ಯನು ಸಾರಾದನು. ಸಾಧುವು ಅಂದಿಗೆ ತೃಪ್ತಿ ಹೊಂದಿ ಮರುದಿನ ರಾತ್ರಿ ಒಂದು ಹಳ್ಳಿಗೆ ನುಗ್ಗಿ "ನನಗೆ ನರ ರಕ್ತ ಬೇಕು" ಎಂದು ಕೂಗಿದನು. ಜನರು ಎಚ್ಚರಗೊಳ್ಳುವಷ್ಟರಲ್ಲಿ, ಒಂದು ಜಗಲಿಯ ಮೇಲೆ ಮಲಗಿದ್ದ ಮಗುವನ್ನೆತ್ತಿಕೊಂಡನು. ಆಗಲೇ ಪೊಲೀಸರು ಬಂದು ದಸ್ತಗಿರಿ ಮಾಡಿದರು.

ವಿದೇಶ.

ಕಳೆದ ವಾರದಲ್ಲಿ ಬ್ರಿಟನ್ನಿನ ಹೊಸ ಪಾರ್ಲಿಮೆಂಟಿನ ಮಂಡಳದ ರಚನೆಯಾಯಿತು. ಅದರಲ್ಲಿ 22 ಜನರು ಸೆಕ್ರೆಟರಿಯೆಟ್‌ನಲ್ಲಿದ್ದು 15 ಜನರು ಕನ್ಸರ್ವೇಟಿವ್ಸ್, 3 ನೇಶನಲ್ ಲೇಬರ್ಸ್, 3 ನೇಶನಲ್ ಲಿಬರಲ್ ಹೀಗೆ ಜನರು ಇರುವರು.

ಹಿಂದೂ ದೇಶದಲ್ಲಿ ಕಾಳಿ ನಿಗ್ರಹಗಳ ಮುಂದೆ ಪ್ರಾಣ ಬಲಿಯಾಗುತ್ತಿದೆ. ಅಮೇರಿಕಾದಲ್ಲಿ ವೋಟಿಲ್ಲದ ಡೈರರು ವೋಟಾರರಿಗೆ ನರಬಲಿ ಪಡೆಯುತ್ತಿರುವರು. ಕಳೆದ ಮೂರು ತಿಂಗಳುಗಳಲ್ಲಿ 7 ಜನರು ಹೀಗೆ ಬಲಿಯಾದರೆನ್ನುತ್ತಿದೆ ಒಂದು ವಂದಿ ಇದು ಪ್ರತಿ 19 ನಿಮಿಷಕ್ಕೊಬ್ಬನಂತೆ ಲೆಕ್ಕ.

ನ್ಯೂಜೀಲಾಂಡಿನ ಮಿ. ಆರ್. ಡಬ್ಲ್ಯೂ. ಡಿವೆಂಟೊಕ್ ಎಂಬವರು, ಭೂಕಂಪದಲ್ಲಾ ಕೆಡದೆ ಉಳಿವ ಕಟ್ಟಡಗಳನ್ನು ರಚಿಸಬಹುದೆಂದು ಒಂದು ಸೂಚನೆ ಕೊಟ್ಟಿರುವರು. ಕಬ್ಬಿಣ ಮತ್ತು ಕಾಂಕ್ರೀಟು ಪ್ಲೇಟುಗಳಿಂದಲೇ ಈ ಕಟ್ಟಡಗಳು ಸಿದ್ಧವಾಗುವುದಾದರೂ, 'ರೆನ್‌ಫೋರ್ಸ್ಡ್' ಕಾಂಕ್ರೀಟ್ ಕಟ್ಟಡಗಳಿಗಿಂತ ಇವು ಕಡಿಮೆ ಖರ್ಚಿನಲ್ಲಿ ರಚಿಸಬರುವುದೆಂತೆ ಎಂದು ಅವರು ಭರವಸೆ ಹೇಳುತ್ತಾರೆ. ಇಂತಹ ಕಟ್ಟಡಗಳಿಗೆ ಕಾಂಕ್ರೀಟಿನ ಪುಚಾಂಗವಿರುತ್ತದೆ.

ಅಮೆರಿಕದ ಯೂನೈಟೆಡ್ ಸ್ಟೇಟ್ಸ್‌ನಲ್ಲಿ ಪ್ರತಿ 42 ಮಂದಿ ಗೊಬ್ಬನು, ಜೈಲಿಗೆ ಹೋದವ. ತಕ್ಷೀರುಗಾರ, ಇಲ್ಲವೆ ದಸ್ತಗಿರಿಗಾಗಿ ಪೊಲೀಸ್ ರಿಕಾರ್ಡಿರುವವರಾಗಿರುವರು. ದಸ್ತಗಿರಿಯಾದ ಸ್ತ್ರೀ ಪುರುಷರ 4800,000 ಬೆರಳ ಮುದ್ರೆಗಳು ತೆಗೆಯಲ್ಪಟ್ಟಿವೆ. ಇವರಲ್ಲಿ ಒಂದು ಮಿಲ್ಯ ಶಕ್ಕಿಗಾರರಾಗಿರುವರು. ಈ ಒಂದು ಮಿಲ್ಯ ವಂಚನೆ ಕೇಡಿಗಳಾಗಿದ್ದು 200 ದ 12 ಜಾರಿಯು ವರೆಗೆ ಜೈಲಿಗೆ ಹೋಗಿರುವುದು. ದಿನೇ ದಿನೇ ಹೆಚ್ಚುತ್ತಿರುವ ಅಮೇರಿಕನ ತಕ್ಷೀರುಗಳನ್ನು ತಡೆಗಟ್ಟುವುದು ಹೇಗೆಂಬುವುದು ಸರ್ಕಾರಕ್ಕೊಂದು ಅಸಾಧ್ಯ ಸಮಸ್ಯೆ.

ಗ್ರೇಟ್ ಬ್ರಿಟನ್ನಿನ ಪ್ರಜೆಗಳು ಅಪಾರ ದ್ರವ್ಯವನ್ನು ಶೇಖರಿಸಿಟ್ಟಿದ್ದಾರೆಂದೂ, ಅದನ್ನು ಎಲ್ಲಿಯೂದರೂ ಭದ್ರವಾದ ಮತ್ತು ನಂಬಿಕೆಗೆ ಅರ್ಹವಾದ ಬ್ಯಾಂಕಿನಲ್ಲಿಯೋ, ಸರಿಯಾಗಿ ಬಡ್ಡಿ ಪಾವತಿಮಾಡುವ ಇನ್ಯಾವ ಸಂಸ್ಥೆಯಲ್ಲಿಯೂ ಹೂಡದೇ ಇಟ್ಟ ಬಡ್ಡಿ ಸಂಪಾದಿಸಬೇಕೆಂಬ ಆಕಾಂಕ್ಷೆಯುಳ್ಳವರಾಗಿದ್ದಾರೆಂದೂ ಹೇಳಲಾಗಿದೆ. ಉದಾಹರಣೆಗಾಗಿ ವಿಂಡಸ್ಟರ್ ಕಾರ್ಪೋರೇಷನ್ನಿನವರು 40 ಲಕ್ಷ ಪೌಂಡು ಹಣ ಸಾಲ ಬೇಕೆಂದೂ, ಶೇಕಡ ಮೂರರಂತೆ ಬಡ್ಡಿ ಕೊಡುವುದಾಗಿಯೂ ಪ್ರಕಟಿಸಿದರು. ಅದಕ್ಕೆ 13 ಕೋಟಿ ಪೌಂಡು ಸಾಲ ದೊರಕುವಷ್ಟು ದರಖಾಸ್ತುಗಳು ಬಂದವು. 10 ಸಾವಿರ ಪೌಂಡು ಸಾಲ ಕೊಡುತ್ತೇವೆಂದವರಿಂದ 300 ಪೌಂಡುಗಳು ಮಾತ್ರ ತೆಗೆದುಕೊಳ್ಳಲಾಯಿತೆಂದು ಪ್ರಕಟವಾಗಿದೆ.

ಸೂಚನೆ.

ಮೇ ತಾ. 31ಕ್ಕೆ ನಮ್ಮ ಪತ್ರಿಕೆಯ ಹಳೇ ವರ್ಷವು ಮುಗಿದು, ಜೂನ್ 1ಕ್ಕೆ ಹೊಸ ವರ್ಷ ಪ್ರಾರಂಭವಾಗುವುದರಿಂದ್ದು ಕಳೆದ ವರ್ಷದ ಚಂದಾ ಪೂರ್ತಿ ಸೆಟ್ಲ್ ಮಾಡದೆ ಇರುವವರು ತಮ್ಮ ಹಳ್ಳೀ ಬಾಕಿಯನ್ನು ಮತ್ತು ಹೊಸ ವರ್ಷದ ಚಂದಾವನ್ನೂ ಸಹ ಕೂಡಲೆ ಪಾವತಿ ಮಾಡಿ ಪತ್ರಿಕೆಯ ಕೆಲಸಕ್ಕೆ ಉತ್ತೇಜನ ಕೊಡಬೇಕಾಗಿ ವಿನಂತ

ಕೊಡವ ಪದ್ಧತಿಯ ಕಾಯಿದೆಯನ್ನು ಮಾಡಿಸುವ ವಿಷಯ ಕಮಿಶನರವರಿಗೆ ಅರ್ಜಿ.

ಕೊಡಗು ಕಮಿಶನರ್ ಸಾಹೇಬರವರ ಜನಾಬಿಗೆ.

ದಕ್ಷಿಣ ಕೊಡಗು ತಾಲೋಕಿನ ಈ ಕೆಳಗೆ ಸೈನ್ ಮಾಡಿದ ರೈತಾಪಿ ಜನರು ಬರಕೊಂಡ ಅರ್ಜಿ ಆದಾಗಿ:—

ಸನ್ 1871ನೇ ಇಸವಿಯಲ್ಲು ಕೊಡಗು ದೇಶದ ಸುಪರಿಂಟೆಂಡೆಂಟರಾಗಿದ್ದ ಕೆಪ್ಟನ್ ಮೆ. ಕೋಲ್ ಸಾಹೇಬರು ಕೊಡಗು ನಿವಾಸಿಗಳ 'ಕಷ್ಟಮರಿಲಾ' ಕುರಿತು ಮಾಡಿಟ್ಟಿರುವ ಸಿವಿಲ್ ಲಾ ವ್ಯೂನ್ಯುವಲ್‌ಗೆ ಅನುಸರಿಸಿ ಈ ವರೆಗೆ ಕೊಡಗಿನಲ್ಲಿ ಜಾರಿಯಲ್ಲಿರುವ ಪದ್ಧತಿಯನ್ನು ಈಗಿನ ಕಾಲಕ್ಕೆ ಅನುಸಾರವಾಗಿ ಬದಲಾವಣೆ ಮಾಡುವ ವಿಷಯದಲ್ಲಿ ಕೊಡಗಿನ 2—3 ಮುಖಂಡರಿಗೆ ಮಾತ್ರ ಇಂತಾದ ಕಳುಹಿಸುವಂತೆ ತಾವು ಹುಕುಂ ಕೊಟ್ಟಿರುವುದಾಗಿ ಇತ್ತಲಾಗಿ ನಮಗಳಿಗೆ ತಿಳಿದು ಬಂದಿರುತ್ತೆ.

ಇಂಥಾ ಮಹತ್ತಾದ ವಿಷಯವು ಕೊಡಗು ದೇಶಕ್ಕೆಲ್ಲ ಅನ್ವಯಿಸುವುದರಿಂದ ಇಂಥಾ ಬದಲಾವಣೆಯು 2—3 ಜನರ ಅಭಿಪ್ರಾಯದ ಮೇಲೆ ಆಗತಕ್ಕದ್ದು ಎಂದೂ ನ್ಯಾಯವಲ್ಲ ನು.

ಇಂಥಾ ಅಸಮೂಹಾನಕರವಾದ ಖಾನೂನುಗಳಿಂದ ದೇಶದಲ್ಲು ದ್ರೋಹಪರ ಚಳವಳಿಕ್ಕೆ ಕಾರಣವಾದೀತಾದ ಕಾರಣ ತಾವು ಮೇರ್‌ಬಾನ್ ಇಟ್ಟು ಪ್ರತಿ ತಾಲೋಕು ಸ. ಭೇದಾರರವರ ಮೂಲಕ ಸಕಲ ರೈತಾವಳಿ ಜನರ ಅಭಿಪ್ರಾಯ ತೆಗೆದುಕೊಳ್ಳುವಂತೆ ಇನ್ನಾದರೂ ತಡವಿಲ್ಲದೆ ವಿಚಾರಿಸು ನಡಿಸುವಂತೆ ಆಯಾಯ ತಾಲೋಕುಗಳ ಸ. ಬೇದಾರರವರಿಗೆ ಹುಕುಂ ಕೊಡಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ. 10—6—35.

ಕೇಳಪಂಡ ಅಚ್ಚಯ್ಯ.
ಕೊಡಂದೆರ ಸುಬ್ಬಯ್ಯ.
ಚೆಪ್ಪುಡಿರ ಟಿ. ಮುತ್ತಣ್ಣ.

ವಗ್ಗೈರೆ 151 ಜನರಿಂದ ಸೈನ್ ಮಾಡಲ್ಪಟ್ಟಿರುವ ಅರ್ಜಿ ಕಳುಹಿಸಲಾಗಿದೆ.

ಕೆ. ಚಂಗಪ್ಪ.

ಪತ್ರವ್ಯವಹಾರ.

[ಭೂಸ್ವಾಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಗಣಪತಿ ಬೀದಿಗೆ ನೀರು ಬಂತು!

ಅಯ್ಯಾ,

'ಮಡಿಕೇರಿ ಗಣಪತಿ ಬೀದಿಗೆ ಈ ವಾರ ನೀರು ಬಂತು' ಎಂಬ ವರ್ತಮಾನವನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂದು ಗಣಪತಿ ಬೀದಿಯ ನಿವಾಸಿಯೊಬ್ಬ ನನ್ನ ಮಿತ್ರರೊಬ್ಬರು ನನ್ನನ್ನು ಕೇಳಿಕೊಂಡರು. ಇದೇನು ವಿಶೇಷದ ವರ್ತಮಾನವೋ, ಇದು ಪತ್ರಿಕೆಯಲ್ಲಿ ಪ್ರಕಟಿಸಲು ಯೋಗ್ಯವಾದದ್ದೋ ಎಂದು ನಾನು ತಮಾಷೆ ಮಾಡಿದೆನು. ಅದಕ್ಕೆ ಅವನು ವ್ಯಸನ ಸೂಚಕವಾದ ಸ್ವರದಿಂದ ಹೀಗೆಂದನು—'ಪಟ್ಟಣದ ಬೇರೆ ಎಲ್ಲಾ ಕಡೆಗಳಲ್ಲಿ ವಾಸವಿರುವವರಂತೆಯೇ ಈ ಗಣಪತಿ ಬೀದಿಯಲ್ಲಿರುವವರೂ ಮುನ್ಸಿಪಲ್ ಕಂದಾಯ ಕೊಡುತ್ತಿರುವಲ್ಲಿ ಬೇರೆ ಕಡೆಗಳ ಜನರಿಗೆಲ್ಲಾ ಹೆಚ್ಚಿನ ಕಾಲವೂ, ಕೆಲವರಿಗೆ ಸತತ ನಲ್ಲಿಗಳ ಮೂಲಕ ನೀರು ಸರಬರಾಯಿ ಇರುವಾಗ್ಯೆ ಈ ಬೀದಿಯ ಬಡಪಾಯಿಗಳಿಗೆ ಈಗ ಎರಡು—ಮೂರು ತಿಂಗಳಿಂದ ನೀರೇ ಬಾರದೆ ಇದ್ದುದು ಶೋಚನೀಯವಲ್ಲವೇ? ಅವರಿಗೀಗ ಮಳೆ ಸುರುವಾದುದರಿಂದ ನೀರು ಬರಲು ಪತ್ರ ರಂಭಿಸಿತೆಂಬ ವಿಶೇಷ ವಾರ್ತೆಯು ನಮ್ಮ ಮುನ್ಸಿಪಾಲಿಟಿಯವರೂ, ದೇಶದವರೂ, ಸರ್ಕಾರದವರೂ ತಿಳಿಯಬೇಕಾದದ್ದಲ್ಲವೇ?'

ಆದರೆ ಪತ್ರಿಕಾ ಸಂಪಾದಕರು ಇದನ್ನು ವರ್ತಮಾನ ಸಂಗ್ರಹದ ಸ್ಥಳದಲ್ಲಿ ಪ್ರಕಟಿಸಲಿಕ್ಕಿಲ್ಲವೆಂದು ಬಾತ್ಮಿ ರೂಪದಲ್ಲಿ ಬರೆದು ಕಳುಹಿಸಿದ್ದಾಗಿದೆ. ಮಳೆಯು ಸುರುವಾಗುವ ವರೆಗೆ ಮಹದೇವಪೇಟೆ, ಗಣಪತಿ ಬೀದಿಯ ಕೆಲವರು ಓಂಕಾರೇಶ್ವರ ದೇವಸ್ಥಾನದ ಕೆರೆಯಿಂದ ಗಾಡಿಯಲ್ಲಿ ನೀರು ತಾಗಿಸಿಕೊಂಡು ಜೀವನ ಮಾಡಿರುತ್ತಾರೆ. ಈ ವಿಷಯವು ನಮ್ಮ ಮುನ್ಸಿಪಲ್ ಮೆಂಬರುಗಳಿಗೂ, ಪ್ರೆಸಿಡೆಂಟರಿಗೂ ಗೊತ್ತಾಗಿದೆಯೋ? ಗೊತ್ತಾಗಿದ್ದರೆ ಅವರು ಈ ಕಷ್ಟನಿವಾರಣೆ ಒಗ್ಯೆ ಏನು ಆಲೋಚನೆ ಮಾಡಿರುವರು?

ಪ್ರಥಮತಃವಾಗಿ ಮಡಿಕೇರಿ ಮುನ್ಸಿಪಾಲಿಟಿಯವರು ಚೀಫ್ ಕಮಿಷನರವರಿಗೆ ಒನ್ನಹ ಪತ್ರವನ್ನು ಅರ್ಪಿಸಿದಾಗ್ಯೆ, ಚೀಫ್ ಕಮಿಷನರವರು ನ್ಯಾಯವಾಗಿ, ಉತ್ತರಪತ್ರಂತೆ—125 ಇಂಚ ಮಳೆ ಬೀಳುವ ಮಡಿಕೇರಿಯಲ್ಲಿ ಜನರಿಗೆ ಕುಡಿಯಲು ಸಾಕಷ್ಟು ನೀರು ದೊರಕುವುದಿಲ್ಲವೆಂಬುದು ಆಶ್ಚರ್ಯವೇ ಸರಿ. ಮುನ್ಸಿಪಾಲಿಟಿಯವರು, ದುಂದುಗಾರಿಕೆಯ ವಿದ್ಯುಚ್ಛಕ್ತಿ ದೀಪ, ಟೌನ್ ಹಾಲ್ ಮುಂತಾದವುಗಳಿಗೆ ಹಣ ವೆಚ್ಚ ಮಾಡುವುದರ ಬದಲು, ಕಂದಾಯ ಕೊಡುವ ಬಡ ಜನರ ಪ್ರಾಣ ಉಳಿಸಲು ಅತ್ಯಗತ್ಯವಾದ ನೀರು ಸರಬರಾಯಿಗೆ ಹಣ ವಿಚಾರ ಮಾಡಬೇಕಾದದ್ದು ಅವರ ಧರ್ಮವಲ್ಲವೇ? ಇನ್ನಾದರೂ ಈ ಮುಖ್ಯ ವಿಷಯಕ್ಕೆ ಗಮನಕೊಡುವರೇ?

'ಪಟ್ಟಣಿಗ.'

ನಮ್ಮಲ್ಲಿ ಹಲವರ ವಿಚಾರ.

'ನಮಗೆ ಬಲು ಕೆಲಸ; ಸಮಯವೇ ಇಲ್ಲ' ಎಂದು ಹಲವರು ಹೇಳುವದನ್ನು ಅನೇಕರು ಕೇಳಿರಬಹುದು ಇದು ನಿಜವೇ? ಇನ್ನೂ ಕೆಲವರು ನಮ್ಮ 'ಅದೃಷ್ಟ;' 'ದೈವಾನುಗ್ರಹ;' 'ಹಣೆಬರಹ' ಎಂದು ಹೇಳಿಕೊಳ್ಳುತ್ತಾ ತಾವು ಮಾಡಬೇಕಾದದನ್ನು ಮಾಡದೆಯೂ, ಇತರರ ನಡೆ ನೀತಿಗಳನ್ನು ಛಿದ್ರವಿಸಿತ್ತಲೂ ಇರುವರು. ಹೀಗೆ ಕಾಲಹರಣ ಮಾಡಿಕೊಂಡು ಪುರುಷಾಯುಷ್ಯವನ್ನು ಕಳೆದುಕೊಂಡು ಬರುವವರು ಬಹಳವಾಗಿದ್ದಾರೆ.

ಭೂಲೋಕದಲ್ಲಿರುವ ಮನುಷ್ಯರೆಲ್ಲರೂ ಒಂದೇ ಬಗೆಯಾಗಿರುವದಿಲ್ಲವು. ದೇಹಶಕ್ತಿಯಲ್ಲಿಯೂ, ಬುದ್ಧಿಶಕ್ತಿಯಲ್ಲಿಯೂ, ಒಬ್ಬರಂತೆ ಮತ್ತೊಬ್ಬರು ಇರುವುದಿಲ್ಲವು ಆದರೆ ಶ್ರೀ ಪರಮಾತ್ಮನು ಅವರವರ ಯೋಗ್ಯತೆಗೆ ಸರಿಯಾದ ಕಾರ್ಯವನ್ನೂ, ಮಾಡುವ ಶಕ್ತಿಯನ್ನೂ, ಆಲೋಚನೆಯನ್ನು ಎಲ್ಲರಿಗೂ ಕೊಟ್ಟಿರುತ್ತಾನೆ. ಹೀಗಿರುವಲ್ಲಿ ಅವೃಷ್ಟವೆನ್ನಿರೆ ಆಗುತ್ತದೆ, ಇಲ್ಲದಿದ್ದರೆ ಇಲ್ಲ, ಎಂದು ನಿರುದ್ಯೋಗಿಯಾಗಿರುವವನು ತನ್ನ ಜಡ ಮನಸ್ಸಿಗೆ ಸಮಾಧಾನವನ್ನು ಹೇಳಿಕೊಳ್ಳುವ ಈ ಮಾತು ಎಂದಿಗೂ ನ್ಯಾಯಸಮ್ಮತವಾದದಲ್ಲ. ಯಾವ ಕಾರ್ಯವನ್ನಾದರೂ ಮಾಡಿ ತಕ್ಕ ಫಲವನ್ನು ಪಡೆಯುವದಕ್ಕೆ ತಕ್ಕದಾದ ಯೋಗ್ಯತೆಯೂ ಸಾಮರ್ಥ್ಯವೂ ತನ್ನಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಚೆನ್ನಾಗಿ ಪರೀಕ್ಷಿಸಿ ತಿಳಿಯುವುದು ಪ್ರತಿಯೊಬ್ಬನ ಕೆಲಸವಾಗಿದೆ.

'ತನ್ನಲ್ಲು ಐಶ್ವರ್ಯವೂ ಇಲ್ಲ, ಅಧಿಕಾರದ ಬಲವೂ ಇಲ್ಲ,' ಆದರೆ ಅಭಿವೃದ್ಧಿಯನ್ನು ಹೊಂದುವದಕ್ಕೆ ಇವೆರಡು ಸಹಾಯಗಳು ಇಲ್ಲವಾದರೂ ಭಗವಂತನು ತನಗೆ ಜೀವವನ್ನು ಕೊಟ್ಟು ಉಳಿಸಿದರೆ ಐಶ್ವರ್ಯವನ್ನೂ, ಅಧಿಕಾರ ಬಲವನ್ನೂ ಸಹ ಪಡೆಯುತ್ತೇನೆಂದು ಒಬ್ಬನು ಹೇಳಿರುತ್ತಾನೆ. ತನ್ನ ತನ್ನ ಅಭಿವೃದ್ಧಿಗೆ ಯಾವ ಸಮಯದಲ್ಲಿ ಯಾವ ಸಹಾಯವು ಯಾವ ರೀತಿಯಲ್ಲಿ ಬಂದೊದಗುವದೋ ಎಂದು ತನ್ನ ಶರೀರವನ್ನೆಲ್ಲಾ ಕಣ್ಣಾಗಿ ಮಾಡಿಕೊಂಡು ಕಾಯುತ್ತಿರಬೇಕು. ಸಮಯಾನುಕೂಲವು ಬರುವುದು ಬಹಳ ವಿರಳ 'Oppurtunity rarely comes and when it comes one must hold it at the forelock—ಅವಿವೇಕಿಗಳಾದವರಿಗೆ ಭಗವಂತನು ಅವರ ದುಸ್ಥಿತಿಯನ್ನು ಪರಿಹರಿಸುವದಕ್ಕಾಗಿ ಎಷ್ಟೋ ಸಹಾಯಗಳನ್ನು ಪ್ರತಿ ನಿಮಿಷವೂ ಕೊಡುತ್ತಾ ಬಂದರೂ, ಮಂದಭಾಗ್ಯರಾದ ಅವರಿಗೆ ಅವುಗಳ ಮೇಲೆ ದೃಷ್ಟಿಯೇ ಬೀಳುವುದಿಲ್ಲ. ಆದುದರಿಂದ ವಿವೇಕಿಗಳಾದ ಸ್ನೇಯರೇ ಆಗಲಿ ಪುರುಷರೇ ಆಗಲಿ ಇದನ್ನು ಗ್ರಹಿಸಿದರೆ ಆ ಭಗವಂತನು ತಮಗೆ ಅನುಗ್ರಹಿಸಿರುವ ಈ ಉಚ್ಚ ವರ್ತ, ಶ್ರೇಷ್ಠ ತದ ಜೀವವೂ ನ ಕಾಲದಲ್ಲಿ ಪ್ರತಿ ದಿನವೂ ಸ್ವಲ್ಪ ಸ್ವಲ್ಪವಾಗಿ ಯಾವುದಾವ ರೂ ಒಂದು ಕಾರ್ಯವನ್ನು ಮಾಡುತ್ತಾ ಬಂದಲ್ಲು 'ಪಲವಂ ಪಲ್ಲಸಮುದ್ರವೈ' ಎಂಬ ಸರ್ವಜ್ಞ ಪದದಂತೆ ಕೆಲವು ದಿವಸಗಳಲ್ಲೆ ತಮಗೆ ವಿಸ್ಮಯವುಂಟಾಗುವಷ್ಟು ದೊಡ್ಡ ಕೆಲಸವಾಗುವುದು. ಪ್ರಯತ್ನಿಸಿಗಳಾದವರಿಗೆ ದೇವರೂ ಸಹಾಯಕನಾಗಿದ್ದಾನೆಂಬುದು ಒಂದು ಗಾದೆ. ಇದು ಮನುಷ್ಯರೆಲ್ಲರಿಗೂ ಅನುಭವಸಿದ್ಧವಾದ ವಿಷಯವಾಗಿದೆ. ಆದರೆ ಇದಕ್ಕೆ ಜನ ಸಹಾಯವೂ, ಸ್ವಪ್ರಯತ್ನವೂ ಅಗತ್ಯವಾಗಿ ಬೇಕು. ಆದರೆ ಯಾವ ಪುರುಷನು ಜನಸಹಾಯವನ್ನು ಬಯಸದೆ ಉದ್ದೇಶಿಸಿದ ಕಾರ್ಯವನ್ನು ತಾನಾಗಿ ನೆರವೇರಿಸಲು ಪ್ರಯತ್ನ ಪಡುತ್ತಾನೋ ಅವನಲ್ಲಿರುವ ಸ್ವಭಾವಿಕವಾದ ಶಕ್ತಿಯೂ ವೃದ್ಧಿಹೊಂದುತ್ತದೆ, 'ಕಟ್ಟಿಕೊಟ್ಟ ಬುತ್ತಿಯೂ, ಹೇಳಿಕೊಟ್ಟ ಬುದ್ಧಿಯೂ ಎಲ್ಲಿನ ವರೆಗೆ ಬರುವದು' ಎಂಬುವಂತೆ ಮಾರಹತ್ತುವನನ್ನು ಎಲ್ಲಿ ಕನಕ ತಳ್ಳಬಹುದು? ಆದ ಕಾರಣ ಯಾವಾಗಲೂ ಇತರರ ಸಹಾಯವನ್ನು ನಿರೀಕ್ಷಿಸುತ್ತಾ ಇರುವುದನ್ನು ಬಿಟ್ಟು ಸ್ವಪ್ರಯತ್ನಕ್ಕನ್ವೇ ಅವಲಂಬಿಸುವದು ಒಳ್ಳೇದು.

ನಮ್ಮ ದೇಶದಲ್ಲಿ ವ್ಯವಸಾಯಗಾರರಾದ ನಾವು ಹೆಚ್ಚಾಗಿ ನಮ್ಮ ನೆರೆಹೊರೆಯವರಿಂದಲೂ, ಸಹಕಾರದಿಂದಲೂ, ಅನ್ಯೋನ್ಯ ಪ್ರೇಮಭಾವದಿಂದಲೂ ವೃದ್ಧಿಯಾಗಬೇಕಲ್ಲದೆ ಅನ್ಯತಃ ಇತರ ಯಾವ ಸಲಹೆಗಳಿಂದಾಗಲೀ, ನಮ್ಮಲ್ಲಿ ಒಲತಾಯಿ ಮಕ್ಕಳೋಪಾದಿಯಲ್ಲಿ ನೋಡುವ ಪರಕೀಯ ಸಂಸ್ಥಾನದ ಕಿಂಚಿತ್ ಸಹಾಯಗಳಿಂದಲೂ ನಮಗೆ ಯಾವ ಪ್ರಯೋಜನವಿಲ್ಲವೆಂದು ಇದು ಒಂದು ನೂರು ವರ್ಷಗಳಿಂದ ನೈತರಿಗೆ ಅನುಭವದ ವಿಷಯವಾಗಿದೆ. 'ನೆರೆ ಕಟ್ಟಿರೆ ತಾಸಿನ ಕೆಟ್ಟ' ಎಂಬುದನ್ನು ಎಲ್ಲರೂ ತಿಳಿಯಬೇಕಲ್ಲದೆ 'ನೆರೆ ಕಟ್ಟಿರೆ ಕರು ಕಟ್ಟಲು ಹಂಬಾಯಿತು' ಎಂಬಂತಾಗಿ ವಿವೇಕಿಗಳಲ್ಲರು ಮಿತಿಮೀರಿ ಹಾಳಾಗುವದು ಬಿಲ್ಲದೆ ಕೆಟ್ಟವನ ಜೊತೆಯಲ್ಲು ತಾನೂ ತನ್ನ ಮನೆಯವರು, ಊರಿನ ಸಕಲ ಬಿಡಬೇಕಾಗುವದು ಒಟ್ಟಾರೆ ಹಾಳಾಗುವದು

ನಮ್ಮ ದೇಶದಲ್ಲಿ ವ್ಯವಸಾಯಗಾರರು ಹಾಳಾಗಲು ಒಂದನೆ ಕಾರಣವು—ನೆರೆಹೊರೆಯವರಲ್ಲಿ ಕಲಹ ಬೆಳೆಸುವುದು ಆಜೆ ಈಜೆ ಚಾಡಿ, ಪಿತಲಾಟ ಮಾಡಿಕೊಂಡು, ಬದಕುವವನನ್ನು ಕಂಡರೆ ಹೊಟ್ಟೆ ಉರಿಯಿಂದ ನಾನಾತರದ ಕೇಡು ಬಗೆಯುವುದೂ, ವಗ್ಗೈರೆ ದುಷ್ಕೃತ್ಯದಿಂದಲೂ, ತಮ್ಮ ತಮ್ಮ ಕರ, ಹಂದಿ, ಕೋಳಿ ವಗ್ಗೈರೆಗಳನ್ನು ಇತರರ ಹೊಲದಲ್ಲಿ ಮೇಯಲು ಬಿಟ್ಟು ಲೂಟಿ ಮಾಡಿಸುತ್ತಾ ಇರುವುದರಿಂದಲೂ ಅನ್ಯೋನ್ಯ ಸಹಾಯವಿಲ್ಲದೆ, 'ಗುಂಡಿಗೆ ಬಿದ್ದ ತೋಳನನ್ನು ಕುರಿ ಆಳಿಗೆ ಒಂದು ಕಲ್ಲು' ಎಂಬುವ ಹಾಗೆ 'ಅಗತ್ಯಾನಕಾಣ' ಇಲ್ಲ ತ್ತಿದ್ದ ಸಂದ' ಎಂಬುದಾಗಿ ಹೇಳಾಡುವರು. Unity is strength ಎಂಬೆದಾಗಿ 'ಒರುಮೈಕ್ಕ ಒಯಿಂಬದ್ ಬರಕತ್ತ್, ಇರ್‌ಮೈಕ್ಕ ಇರುಷದ' ದರಿದ್ರ,' ಎಂಬುದನ್ನೆ ಪ್ರತೀ ಗಳಿಗೆಯೂ ನೆರೆಹೊರೆಯವರೂ, ಖಂಡಿತವಾಗಿ ಮರೆತಿರುವುದರಿಂದಲೇ ನಮ್ಮ ದೇಶವು ಹೀನ ಸ್ಥಿತಿಗೆ ಬಂದಿರುವುದು. ಇನ್ನಾದರೂ ನಮ್ಮ ಜನರು ಕಣ್ಣು ತೆರೆದು ಎಚ್ಚತ್ತು ಅನ್ಯರವರ ಸಾಹಾಯವನ್ನೂ, ತನ್ನು ನೆರೆಹೊರೆಯವರ ಸಾಹಾಯವನ್ನೂ ಪರಿಶೋಧಿಸಿ ನೋಡಿ, 'ತಾನೆ ಕೆಟ್ಟತ್ತಿಂಗಿಯೂ ನೆರೆ ನಂದಾಡಿ' ಎಂಬ ಗಾದೆಯನ್ನು ಅನುಸರಿಸಿ ನಡೆದರೆ ದೈವಾನುಗ್ರಹದಿಂದ ಕೂಡಲೇ ಎಲ್ಲರೂ ಒಳ್ಳೇ ದಾರಿಗೆ ಬರುವರು. ಅಲ್ಲದೆ ಹೋದರೆ ಖಂಡಿತವಾಗಿಯೂ ನಮಗೆ ವೇಕ್ಷವಿಲ್ಲವು. ಇಲ್ಲದೆ ಹೊರಗಿನವರು ಏನೇ ಮಾಡಿದರೂ, ಹೇಳಿದರೂ, ಎಷ್ಟೇ ಶ್ರಮಪಟ್ಟು ಬೋಧಿಸಿದರೂ 'ಮೆಡಿದುಣ್ಣೋ ಮಹಾರಾಯ' ಎಂದಲ್ಲದೆ 'ಪತ್ತ್' ಒತ್ತಕ್ಕ ಮುತ್ತ್' ಎಂದಾಗುವುದಿಲ್ಲ. ಆದುದರಿಂದ ನಾವು ನಮ್ಮ ನಮ್ಮ ಜೀವನೋಪಾಯಕ್ಕೆ ನಾವೇ ದಾರಿ ಕಂಡು ನಮ್ಮ ಮುಂದಳಿ ಅಭಿವೃದ್ಧಿ ಕುರಿತು ಶ್ರಮಪಡಬೇಕಲ್ಲದೆ, ಈ ವಿಚಾರದಲು ಡಾ. ಹಡೆಗೇಕರವರು ವೀರಾಜಪೇಟೆ ವಿಂಟಿಂಗಿನಲ್ಲಿ ಹೇಳಿದ ಪ್ರೋಕ್ತ ನಮ್ಮ ವೇಕ್ಷವು ಮಂಕಿಯ ಹಾಗೆ ಆಕಾಶದಿಂದ ಬೀಳುವಂತೆ ಇಲ್ಲ, ಅಥವಾ ವಸಿನ ಹಣ್ಣಿನ ಹಾಗೆ ಮರದಿಂದ ಕಾಯ್ಯಲಿಕ್ಕೆ ಸಿಕ್ಕುವುದಿಲ್ಲ ಆದುದರಿಂದ ವಿವೇಕಿಗಳು ಅನ್ಯರ ಸಮಯೋಚಿತವಾದ ಸಹಾಯೋಜನವಾಗಿ ಕಳೆಯದೆ ಕಾಲದ ಬೆಲೆಯನ್ನು ಗ್ರಹಿಸಿ ಸಾಧ್ಯವಾದ ಮಟ್ಟಿಗೆ ಸುಮ್ಮನಿರದೆ ಜನಸಾಮಾನ್ಯಕ್ಕವಶ್ಯವಾದ ಸಂಪಾದನೆಯಲ್ಲು ಮನಸ್ಸಿನಿಂದ ಆಲೋಚಿಸುತ್ತಾ, ಕೈಯಿಂದ ಕೆಲಸ ಮಾಡುತ್ತಾ, ಕಾಲಿನಿಂದ ನಡೆಯುತ್ತಾ, ಕಣ್ಣಿನಿಂದ ನೋಡುತ್ತಾ, ಕಿವಿಯಿಂದ ಕೇಳುತ್ತಾ; ಅನುದಿನವೂ ಪ್ರಯತ್ನ ಪಡುತ್ತಾ ಇರಬೇಕು.

ವ್ಯರ್ಥವಾಗಿ ಕಾಲಹರಣ ಮಾಡುವವರು ತಾವೂ ನಷ್ಟ ಪಡುವದಲ್ಲದೆ ಇತರರ ಲಾಭವನ್ನು ಸಹ ನಷ್ಟಪಡಿಸುವವರಾಗಿದ್ದಾರೆ. ಇದ ನಮ್ಮಿಬರಲ್ಲಿ ಬಹು ಸಾಧಾರಣವಾಗಿದ್ದು ವದಕ್ಕೆ ಕಾಲದ ಬೆಲೆಯನ್ನು ಅರಿಯದಿರುವದೇ ಕಾರಣವು ಕಾಲವೇ ನಮ್ಮ ಮೇಲೆ ಹೇರಿರುವ ಸಾಲ. ಕಾಲಹರಣದಿಂದ ಹೊರುವ ಸಾಲವೆಲ್ಲಾ ಕಾಲವಿನಿಯೋಗದಿಂದಲೇ ಪರಿಹಾರವಾಗತಕ್ಕದಾಗಿದೆ

ನಮ್ಮ ದೇಶದ ವ್ಯವಸಾಯಗಾರರು ಹೀಗೆ ಆಲೋಚಿಸಿ ಏನಾದರೂ ಒಳ್ಳೆ ಉತ್ಪತ್ತಿಯ ದಾರಿಯನ್ನೂ, ಈಗ ಇರುವ ಆದಾಯವನ್ನು ಇಮ್ಮಡಿಯಾಗಿ ಮಾಡುವ ಯೋಜನೆಯನ್ನೂ ಮಾಡದೆ, ಇದ್ದ ಹಾಗೆ ಇತರರು ಸಹಾಯ ಮಾಡಲಿ ಎಂದು ಕುಳಿತರೆ ನಮಗಳ ಸಂಸಾರದ ಪೇಚಾಟದಲ್ಲಿ ಸಿಕ್ಕಿ ಹಗಲಿರುಳುಗಳೆಂಬ ಭೇದವನ್ನರಿಯದೆ ಹಲವು ತಾಪತ್ರೆಯನ್ನು ಅನುಭವಿಸಿತ್ತಾ, ಒಕ್ಕಲಿಗನ ನೊಗಕ್ಕೆ ಹೆಗಲನ್ನು ಚಾಚಿ ಕಟ್ಟಿಸಿಕೊಂಡು ಬಸಿಲೆನ್ನದೆ, ಮಳೆಯನ್ನದೆ ಕಷ್ಟಪಡುತ್ತಿರುವ ಪಶುವಿನ ಹಾಗೆ ಆಗುವರು. ಒಳ್ಳೆ (Sports-man) ಬೇಟೆಗಾರರೆಂಬದಾಗಿ ಪ್ರಸಿದ್ಧಿ ಪಡೆದು ಬಂದ ನಮ್ಮ ಪಠಕೀಯ ರಾಜರುಗಳಿಗೆ ಇದ್ದೂ ಇಲ್ಲದ ಕಂದಾಯ ಕೊಡುವ ರೈತರ ಹಾಲು ಹಣ್ಣಾಲುಗಳೆಂದೇನು? 'ಮೈಲ್ಡ್ ಕಂಡ್ ನೀರ್, ಬೆಂಟಿ ಕಾರಂಗ್' ಮುದ್ದ'?

'ಜಬ್ಬುವು ಅರುವ.'

ಸೆಲ್ಫ್ ಇಂಗ್ಲಿಷ್ ಸ್ಟಡಿ.

ಕನ್ನಡ ಓದಲು ತಿಳಿದವರು ಒಬ್ಬರ ಸಹಾಯವಿಲ್ಲದೆ



ಇಂಗ್ಲಿಷ್ ಓದುವುದನ್ನೂ ಬರೆಯುವುದನ್ನೂ ಮಾತಾಡುವುದನ್ನೂ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ 2 ತಿಂಗಳಲ್ಲಿ ಕಲಿತುಕೊಳ್ಳಬಹುದು. 880 ಪೇಜುಗಳ ದೊಡ್ಡ ಪುಸ್ತಕ. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಬೇಗನೆ ಬರೆಯಿರಿ ಕ್ರಯ ಪುಸ್ತಕ 1ಕ್ಕೆ ರೂ. 2.

ನಜ್ರದ ಉಂಗುರಗಳು ೧ಕ್ಕೆ ಆಣೆ ೧೨.

ಈ ಉಂಗುರಗಳನ್ನು ಇಮಿಟೇಷನ್ ನಜ್ರದ ಕಲ್ಲುಗಳನ್ನು ಇಟ್ಟುರೊಲ್ಡ್ ಗೋಲ್ಡ್ ಭಂಗಾರದಿಂದ ಕೆಟ್ಟಡ-ಕಟ್ಟಿಗೆ. ಇವರ ಬಣ್ಣವು ಎಂದಿಗೂ ಕೆಡದಂತೆ ಇಲೆಕ್ಟ್ರಿಕ್ ಪವರಿನಿಂದ ಬಣ್ಣಹೊಟ್ಟಿದೆ. 1ಕ್ಕೆ 12 ತಸೆ 3 ಉಂಗುರಗಳಿಗೆ 1 ಟ್ರಿಂಪೀಸನ್ನೂ, 6 ಉಂಗುರಗಳಿಗೆ 1 ಪಾಕೆಟ್ ವಾಚನ್ನೂ, 12 ಉಂಗುರಗಳಿಗೆ 1 ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುವೆವು.



ವಿಳಾಸ—ಮೋಥಾ ಎಂಡ್ ಕಂಪೆನಿ,
11. ಪೆರಿಯನಾಯಕ್ಕನ್ ಸ್ಟ್ರೀಟ್,
52—5 ಸೌಕಾರ್‌ಪೇಟೆ, ಮದ್ರಾಸು.

For Sale.

KODAGARAHALLI ESTATE.

Kodagarahalli Estate adjoining Coorghally Estates Ltd., near 11th mile Stone Mercara—Farzerpet road Sunticoppa.

For particulars apply to:—

K. Narsimha Murti
Brahmin Valley,
Mercara.

ಮೂರಾಟಿಕ್ಕಿದೆ.

ಮಡಿಕೇರಿಯಿಂದ ಫ್ರೇಸರ್‌ಪೇಟೆಗೆ ಹೋಗುವ 11 ನೇ ಮೈಲು ಕಲ್ಲಿನ ಬಳಿ ಇರುವ ಕೂರ್ಗಳ್ಳಿ ಕಂಪೆನಿಯವರ ಕಾಫಿ ತೋಟಕ್ಕೆ ಮುಟ್ಟಿಕೊಂಡಿರುವ ಕೊಡಗಳ್ಳಿ ತೋಟವು ಮೂರಾಟಕ್ಕೆ ಸಿದ್ಧವಾಗಿದೆ. ಕೊಂಡುಕೊಳ್ಳಲು ಅಪೇಕ್ಷಿಸುವವರು ಹೆಚ್ಚಿನ ವಿಷಯಕ್ಕೆ ಬರೆದು ತಿಳಿದುಕೊಳ್ಳಬಹುದು.

ಕೆ. ನರಸಿಂಹ ಮೂರ್ತಿ,
ಬ್ರಾಹ್ಮಣ ಕೇರಿ,
ಮಡಿಕೇರಿ.

8—8

ಕಳೆದ ೫೦ ವರ್ಷಗಳಿಂದ ತುಂಬಾ ಉಪಯೋಗಿಸುತ್ತಿರುವ ಪ್ರಖ್ಯಾತವಾದ

ಕರ್ಕಕಂಪನಿ

ಜ್ವರದ ಗುಳಿಗೆಗಳು.

ಚಳಿಜ್ವರ, ವಾತುರ್ಧ ಜ್ವರ, ವಿಷಮ ಒರತೆ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಪಿ. ಒ ಆಗಿ. ಜಾಸ್ತಿ ಕರಿಸಿಕೊಳ್ಳಿ.

ಗಣೇಶ ರಂಜಂಪ್ರ ಕರ್ಕ,
(52—40) ಮುತ್ತು ಕಂಪೆನಿ,
ಗಿರಗಾಂವ, ಬೊಂಬಾಯಿ.



ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯೂ ಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯೂ ಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದಿದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಅಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರಾಯಿಟರ್ಸ್—
ಕೆ. ಟಿ. ಡೋಂಗರೆ ಕಂಪೆನಿ,
(52—19) ಗಿರಿಗಾಂವ್, ಬೊಂಬಾಯಿ.

All kinds of World Famous Guns, Rifles, Revolvers, Pistols, Hunting and Fishing Requisites at Lowest Competitive prices.

ARMS & AMMUNITION.



HUNTING & FISHING REQUISITES.

CURRENT CATALOGUE FREE.

The Bombay Armoury,

329—331, Abdul Rehman Street,

12—4 BOMBAY, 3.

GOVERNMENT SOAP FACTORY,

Bangalore.

ವಿಶ್ವಾಸಾರ್ಹ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲ

ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—17 ಬಿಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ; ಜಿಸ್ಟರಾಗಿದೆ.
(ಸ್ಥಾಪಿಸಲಾದದ್ದು 1922ರಲ್ಲಿ)

		ರೂ
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್‌ಹೊಬಲಗು	—	31,390— 0—0
ಜಮೂಬಂದ ಠೇವಣಾತಿ	—	21,0 196—13—7
ವಸೂಲಾಧ ಕ್ಷೇಮನಿಧಿ	—	75,248— 12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಕ್ಕಹ್ದು.

ಒಂದು ವರ್ಷ ವಾಯಿದೆ ಆಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರಿಂದ ಆಡಿಟ್ ಮಾಡಿಸಲಾಗುತ್ತಾದೆ.

ಪ್ರೆಸಿಡೆಂಟರು, ಮ್ಯಾನೇಜರ್
ಕೆ. ಎನ್. ಸುಬ್ರಾಯ. ರಾ. ಸಾ. ಪಾಂಡಂಡ
(ಆನರರಿ ರಿಜಿಸ್ಟ್ರಾರ್.) ಚಂಗಪ್ಪನವರು,

ಸೆಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಕು 1—7—1934.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ:—ಮೆ. ವಿ. ಆರ್. ತಮ್ಮಯ್ಯನವರು.

ದಕ್ಷಿಣ ಕೊಡಗಿಗೆ:—ಮೆ. ಮೂದೇಟಿರ ಪೂವಯ್ಯನವರು.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ,—ಸಿದ್ದಾಪುರ—ಮೆ. ಐನಂಡ ಮೊಣಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜೆ. ಮೊಣಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಪೂಜೆಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉದ್ದೇಶಗಳೂ, ಬಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮಬದ್ಧವಾಗಿ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಪ್ತಿ ಮಂಜೂರಾತಿ ಫಾರಮುಗಳೂ, ಕುಟುಂಬಸ್ತರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸೆಕ್ಯೂರ್ ಕೀಪರ್ ಖರಾರು ಫಾರಮುಗಳೂ ಓವರ್ ಡ್ರಾಫ್ಟ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜವೂ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಬಯಸುವವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್
"ಕೊಡಗು" ಲಿಮಿಟೆಡ್,
ಮಡಿಕೇರಿ.

THE EMPIRE OF INDIA LIFE ASSURANCE COMPANY, LIMITED.

Established 1897. Head Office.—BOMBAY.

SUMMARY OF RESULTS:—

(Present rates of Interim Bonus)

Rs. 16/— on Whole Life Policies
Rs. 14/— on Endowment Policies } Per Rs. 1000 Sum Assured.

Policies in force	Rs. 11,16,64,000.
Assets	Rs. 4,37,51,000.
Claims paid	Rs. 4,17,00,000.
Income	Rs. 73,37,000.

The PREMIUM RATES charged by this Company are REMARKABLY LOW and hence the above results are all the MORE CREDITABLE We therefore, recommend an "EMPIRE OF INDIA POLICY" to you and your friends.

WANTED INFLUENTIAL AGENTS IN ALL IMPORTANT PLACES.

For particulars please apply to :— Branch Secretary :—

52—33 152/3, COMMERCIAL STREET, Bangalore.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(1874ರಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಯಿವ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೌಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನಾ	ಸಿಂಗಪುರ
ಅಲ್ಲಾಹಾಬಾದು	ಡಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು, 52—25

ಯಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

ಕಟುಕಷಾಯ ಮಲೆ ಜ್ವರಕ್ಕೆ—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿಯೂ ಗುಣವಾಗದಿರುವ ಮಲೆ ಜ್ವರ ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗೆಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ. 1—0—0, 3ಕ್ಕೆ 2—0—0, 6ಕ್ಕೆ 3—8—0, 12ಕ್ಕೆ 14—0—0.

ಮಲೆ ಜ್ವರಕ್ಕೆ ಕಟು ಕಷಾಯ

ಚಂದನಾಸವ—ಇದು ಪ್ರಮೇಹ ಮೂತ್ರ ಕೃಚ್ಛ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಿಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬಾಟ್ಲಿಗೆ ರೂ. 1—4—0, 3ಕ್ಕೆ 3—8—0, 6ಕ್ಕೆ 6—12—0.

ರೋಮನಾಸಿನಿ—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ ಅಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

ಮುನೋಲ್ಲಾಸಿನಿ ತೈಲ—ತಲೆನೋವು, ತಲೆ ತಿರುಗುವುದು, ತಲೆಸುರಿ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು, ಕಿವುಡತನ, ಕಂಣು ನೋವು, ಅಪಸ್ಮಾರ, ನಿದ್ದೆಬಾರದಿರುವುದು, ನೆನಪು ಶಕ್ತಿ ಕುಂದಿಕೋಗುವುದು ಇವುಗಳನ್ನೆಲ್ಲಾ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ಸಿಲ್ಲಿಸಿ, ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ, ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಗೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಸೀಸೆ 1ಕ್ಕೆ ರೂ. 1, 3ಕ್ಕೆ 2—10—0, ಒಂದು ದೊಡ್ಡ ಸೀಸೆಗೆ 2—0—0 3ಕ್ಕೆ 5—8—0.

ವಿಳಾಸ—ಮುನೋಲ್ಲಾಸಿನಿ ಕಂಪೆನಿ,
9 ಮಂಗಳೂರು.

52—18 ಕೆಟಲಾಗು ತರಿಸಿ ನೋಡಿರಿ

Printed & pudlished by P. I. Belliappa at "Kodagu" Press, Mercara for 'Kodagu" Ltd.